ಅಪರಂಜಿ

ಜುಲೈ

1991


ತಿಳಿನಗೆಯ ಕಾರಂಜಿ



* ಪ್ರಕಾಶ್
* ಕಂಭಂ ಕೃಷ್ಣಮೂರ್ತಿ
* ಕಮಲಾ ರಾಮಸ್ವಾಮಿ
* ಶಿವು
* ಅಶೋಕ
* ಎಂ. ಆರ್. ಲ.
* ಎಸ್. ಎನ್. ಶಿವಸ್ವಾಮಿ
* [illegible]
* ಎಂ. ಆರ್. ಸತ್ಯ


ಬಿಡಿ ಪ್ರತಿ: 2 ರೂ. 50 ಪೈ.

ಶುಭಾಶಯಗಳೊಂದಿಗೆ



ಎಸ್. ವಿ. ಆರ್. ಏಜೆನ್ಸೀಸ್

ಬೆಂಗಳೂರು





ಸಂಪುಟ ೮ ಜುಲೈ ೧೯೯೦ ಸಂಚಿಕೆ ೧೦

ಮೋಟಾರ್ ಸೈಕಲ್ ಮೇಲೆ ಇಬ್ಬರು ಎಲ್‌ಟಿಟಿಇ ತರುಣರು ಹೋಗ್ತಾ ಇದ್ರು. ಹಿಂದೆ ಕೂತಿದ್ದೋನು ಚಾಲಕನಿಗೆ ಹೇಳಿದ.

"ಲೋ, ಪಾಟ್‌ಹೋಲ್‌ಗಳ ಮೇಲೆ ಸ್ವಲ್ಪ ನಿಧಾನವಾಗಿ ಹೋಗೋ. ನನ್ನ ಸೊಂಟಕ್ಕೆ ಕಟ್ಟಿರೋ ಬಾಂಬ್ ಪಟ್ಟಿ explode ಆದ್ರೆ ಕಷ್ಟ"

ಅದಕ್ಕೆ ಚಾಲಕ ಏನು ಹೇಳಿದ ಗೊತ್ತೆ.

"ಏನೂ ಪರವಾಗಿಲ್ಲ ಬಿಡೊ, ಈ ಹ್ಯಾಂಡಲ್ ಮೇಲೆ ಹಾಕಿರೊ ಕೈಚೀಲದಲ್ಲಿ ಇನ್ನೊಂದು ಸ್ಪೇರ್ ಬಾಂಬ್ ಇಟ್ಕೊಂಡಿದೀನಿ".

ಗೌರವ ಸಲಹೆಗಾರರು ; ಶ್ರೀ ಅ. ರಾ. ಸೇ. ಶ್ರೀ ಶೇಷಗಿರಿ ಸಂಪಾದಕ : **ಶಿವಕುಮಾರ್**	ಚಂದಾ ವಿವರ : ಬಿಡಿ ಪ್ರತಿ : 2 ರೂ. 50 ಪೈ. ವಾರ್ಷಿಕ ಚಂದಾ : 25 ರೂ. ಆಜೀವ ಚಂದಾ : 250 ರೂ.	ವಿಳಾಸ : ಅಪರಂಜಿ ಕಾರ್ಯಾಲಯ 36, 6ನೆಯ ಮುಖ್ಯ ರಸ್ತೆ ಮಲ್ಲೇಶ್ವರಂ ಬೆಂಗಳೂರು 560003 ಕೆಲಸದ ವೇಳೆ : ಬೆಳಗ್ಗೆ 8ರಿಂದ 10 ಗಂಟೆಯ ವರೆಗೆ

ಈ ಸಂಚಿಕೆಯಲ್ಲಿ

ಮುದ್ರಣ : ಇಂಪ್ರೆಷನ್ಸ್, ಮಲ್ಲೇಶ್ವರಂ, ಬೆಂಗಳೂರು
ದೂರವಾಣಿ: 342144

ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ ೮ ಜುಲೈ ೧೯೯೧ ಸಂಚಿಕೆ ೧೦

ನರಕಕ್ಕೆ ಮೂರು ಮಹಾದ್ವಾರಗಳಿವೆ: ಕಾಮ, ಕ್ರೋಧ, ಲೋಭ

— ಗೀತೆ

ಹಿಂದೆ ಸೂರ್ಯ, ಚಂದ್ರ ವಂಶಗಳ ಧರ್ಮಾತ್ಮರಾದ ರಾಜರು ಭೂಮಿಯನ್ನಾಳುತ್ತಿದ್ದರಂತೆ, ಮೋಹಕ್ಕೊಳಗಾದಾಗಲೂ ಅವರ ನಡತೆ ಧರ್ಮವನ್ನು ಮೀರುತ್ತಿರಲಿಲ್ಲವಂತೆ. ತಾನು ಶಕುಂತಲೆಯನ್ನು ಮೋಹಿಸಿರುವುದರಿಂದ ಅವಳು ಕ್ಷತ್ರಿಯ ಕನ್ಯೆಯೇ ಸರಿ ಎಂದು ದುಷ್ಯಂತನು ತನ್ನ ಮಿತ್ರನಿಗೆ ಹೇಳಿದನಂತೆ.

ಎಲ್ಲಿಯ ಪುರಾಣ ಅದೆಲ್ಲಾ ಗುಬ್ಬಿ ಕಾಗೆ ಕಥೆ ಎಂದು ನಮಗೆ ಅನ್ನಿಸುತ್ತದೆ. ಅದೆಲ್ಲಾ ಶಿಷ್ಟರ ಕಲ್ಪನೆಗಳು. ಇದು ಕಲಿಯುಗವಾದುದರಿಂದ ರಾಜತ್ವಕ್ಕೆ ಚೆಕ್. ದಳವಾಯಿಗಳು, ಸರ್ವಾಧಿಕಾರಿಗಳು ಬಹುತೇಕ ದೇಶಗಳಲ್ಲಿ ಆಳುತ್ತಿದ್ದಾರೆ. ಪರದೇಶಗಳ ಆಂತರಿಕ ವಿಷಯವಾದ್ದರಿಂದ ನಮಗೆ ಅದನ್ನು ಕಟ್ಟಿಕೊಂಡೇನು?

ನಾವು ಸರ್ವತಂತ್ರ ಸ್ವತಂತ್ರವಾದ, ಸರ್ವೋತ್ತಮವಾದ ಪ್ರಜಾಪ್ರಭುತ್ವ ರಾಷ್ಟ್ರದ ಸಾರ್ವಭೌಮ ಪ್ರಜೆಗಳು.

ಇಲ್ಲಿ ಏನೂ ನಿಶ್ಚಿತವಲ್ಲ. ಅದನ್ನು ಪಡೆಯಲು ಎಲ್ಲರಿಗೂ ಸಮಾನವಾದ ಅವಕಾಶವಿದೆ ಎಂಬುದೇ ಮುಖ್ಯ.

ಸತ್ಯ, ಅಹಿಂಸೆ ಎಂಬ ಒಂದೇ ನಾಣ್ಯದ ಎರಡು ಮುಖಗಳನ್ನವಲಂಬಿಸಿ ನಮ್ಮ ರಾಷ್ಟ್ರ ಕಟ್ಟುತ್ತೇವೆ ಎಂದು ಹೊರಟೆವು.


ಈಗ ಖಾದಿ, ಪಾನ ನಿಷೇಧ, ಸ್ವರಾಜ್ಯ, ಎಲ್ಲಾ ಕಲ್ಪನೆ.

ನಾವೆಲ್ಲರೂ ಒಂದೇ. ಆದರೆ ನಮ್ಮ ಜಾತಿ ಹಿಡಿದು ಮಾತಾಡುವುದೇ ನಮ್ಮ ಅಭ್ಯಾಸ.

ಎಲ್ಲರೂ ಒಂದೇ ; ಆದರೆ ಕೆಲವರಿಗೆ ವಿಶೇಷ ಸವಲತ್ತು.

ಅದೇ ಸತ್ಯ ಅಹಿಂಸೆಗಳನ್ನೇ ಸ್ವಲ್ಪ ಬದಲಾವಣೆ ಮಾಡಿ ಉಳಿಸಿಕೊಂಡಿದ್ದೇವೆ. ಹಿಂಸೆಯ ಹಿಂದಿದ್ದ ಅ, ಹಿನ್ನಡೆದು ಸತ್ಯದ ಹಿಂದೆ ಸೇರಿಕೊಂಡಿದೆ.

ಅಷ್ಟಕ್ಕೂ ಬಹುಮತ ನಿರ್ಧರಿಸಿದ್ದೇ ಸತ್ಯವಲ್ಲವೇ ? ದಟ್ಟವಾದ ಕಾಡುಗಳು (ಉಳಿದಿದ್ದರೆ) ಅಲ್ಲಿನ ಜೀವನದ ಮೇಲ್ಪಂಕ್ತಿಯನ್ನೇ ಅನುಸರಿಸಿ, ನಮ್ಮ ಜೀವನವನ್ನು ಪ್ರಕೃತಿ ಸಹಜವಾಗಿ ಬೆಳೆಸಿಕೊಳ್ಳುವುದು ತಪ್ಪೇ ?



ಪ್ರಕಾಶ್

ಡೇರಿ ನೌಕರರ ಮುಷ್ಕರ ಮುಕ್ತಾಯ.

— ಪತ್ರಿಕೆ

ಈಗ ಹೊಟ್ಟೆಗೆ ಒಂದು ಚಂಬು ಹಾಲು ಹೂಯ್ಕೋಬಹುದು ;

* * *

ಇನ್ನೆರಡು ದಿನಗಳಲ್ಲಿ ಪಠ್ಯ ಪುಸ್ತಕ.

—ಶೀರ್ಷಿಕೆ

ಇದೇನು ಆಶ್ವಾಸನೆಯೋ. ಬೆದರಿಕೆಯೋ ?

* * *

'ನಾವು ಸೋತರೂ ಪರವಾಗಿಲ್ಲ, ಮಳೆ ಬರಲಿ.'

—ಶ್ರೀ ಬಂಗಾರಪ್ಪ

ಅಂದರೆ ಕಾಂಗ್ರೈ ಗೆಲ್ಲಲು ಶುಷ್ಕ ಹವ ಬೇಕು ಅಂತಲೋ ? ?

* * *

ನಗರದ ನೂತನ ಆಸ್ಪತ್ರೆಯಲ್ಲಿ ಬಡವರಿಗೆ ವಾರಕ್ಕೊಮ್ಮೆ ಚಿಕಿತ್ಸೆ.

— ಸುದ್ದಿ

ಬಡವರೆಲ್ಲ ವಾರಕ್ಕೊಮ್ಮೆ ಕಾಯಿಲೆ ಬೀಳುವುದನ್ನು ಕಲಿಯಬೇಕು !

* * *

ಚುನಾವಣೆಗಾಗಿ ಹೆಂಡದ ಹೊಳೆ.

—ಶೀರ್ಷಿಕೆ

ಓಟುಗಳೆಲ್ಲ ಕೊಚ್ಚಿ ಹೋದಾವು !

*　　　*　　　*

'ಚುನಾವಣೆಗಳಲ್ಲಿ ನಕಲಿ ನಳರನ್ನು ಆರಿಸಬೇಡಿ.

— ಶ್ರೀ ಬಂಗಾರಪ್ಪ

ಆದರೆ ಇಲ್ಲಿ ಅಸಲಿ ನಳರೇ ಇಲ್ಲವಲ್ಲ ?

*　　　*　　　*

ಮಂಡ್ಯದಲ್ಲಿ ಮನೆಗೆ ಚಿರತೆ ನುಗ್ಗಿತಂತೆ.

— ಸುದ್ದಿ

ಚುನಾವಣೆ ಬಿಸಿ ಅದಕ್ಕೂ ತಟ್ಟಿರಬೇಕು !

*　　　*　　　*

ಇನ್ಸಾಟ್–2 ಉಪಗ್ರಹ ಡಿಸೆಂಬರ್‌ನಲ್ಲಿ ಬಾಹ್ಯಾಕಾಶಕ್ಕೆ.

— ಪತ್ರಿಕೆ

ಆಗಿನ ಸರ್ಕಾರದ ಗ್ರಹಗತಿ ಹೇಗಿರುತ್ತೋ ?

ಬೋರ್‌ವೆಲ್ ಹಗರಣ

ಕಂಭಂ ಕೃಷ್ಣಮೂರ್ತಿ

ಕಾವೇರಿ ತಾಯಿ ಕೈಕೊಟ್ಟ ಮೇಲೆ ಅಕಸ್ಮಾತ್ ನಲ್ಲೀಲಿ ನೀರು ಬಂದರೆ ಅದೇ ಒಂದು ಸ್ಕೂಪ್ ಆಗಿಬಿಡುತ್ತಿತ್ತು. "ಮಂಗಳವಾರ ಮತ್ತು ಶನಿವಾರ ಬೆಂಗಳೂರಿನ ನಾಗರೀಕರಿಗೆ ನೀರು ಪೂರೈಕೆ ಇರುವುದಿಲ್ಲ" ಎಂದು ಜಲ ಮಂಡಳಿಯು ಯಾವ ಸಂಕೋಚವೂ ಇಲ್ಲದೆ, ದೂರದರ್ಶನ ಹಾಗೂ ಅಶರೀರ ವಾಣಿಗಳ ಮೂಲಕ ಸಾರಿದರೂ, ಅನಧಿಕೃತವಾಗಿ ಈ ಎರಡು ದಿನದ ಬಂದ್ ಇಡೀ ವಾರಕ್ಕೆ ವ್ಯಾಪಿಸಿಕೊಳ್ಳುವುದು ಸಾಮಾನ್ಯ ಸಂಗತಿ. ಶನಿವಾರ ನೀರಿಲ್ಲವೆಂದರೆ ಸೋಮವಾರದವರೆಗೆ ನೀರಿಲ್ಲವೆಂತಲೇ ಅರ್ಥ. ಮಂಗಳವಾರ ಇಡೀ ದಿನ ನೀರಿಲ್ಲ ಎಂಬ ಘೋಷಣೆಯ ವ್ಯಾಪ್ತಿ ಪೂರ ಶುಕ್ರವಾರದವರೆಗೂ ಅನ್ವಯಿಸುವ ಸಾಧ್ಯತೆ ಇದೆ. ಪಾಪ, ಜಲಮಂಡಳಿ ತಾನೇ ಏನು ಮಾಡೀತು ?

"ತಿಪ್ಪಗೊಂಡನ ಹಳ್ಳೀಲೇ ನೀರಿಲ್ಲ, ಸ್ವಾಮಿ. ನಾವೇನು ತಲೆ ಚಚ್ಚಿಕೊಳ್ಳಬೇಕು ಹೇಳಿ" ಎಂದು ಅನಾಗರಿಕರ್ಯಾರಾದರೂ ದಬಾಯಿಸಿದಾಗ, ಅವರು ಕೊಡುವ ಸಮಜಾಯಿಷಿ. ಈ ಅವಸ್ಥೆ ಬರುವ ಮೊದಲೇ ಕೆಲವು ಬುದ್ಧಿವಂತರು, ಬಾವಿ ತೋಡಿಸಿ, ಅನುಕೂಲ ಮಾಡಿಕೊಂಡರು. ಇನ್ನೂ ತೀರಾ ಬುದ್ಧಿವಂತರು ನೆಲ ಕೊರೆದು "ಸಂಪು" ಎಂದು ನಾಮಕರಣ ಮಾಡಿದ ತೊಟ್ಟಿಗಳನ್ನು ಮಾಡಿಸಿ, ತೀರು ತುಂಬಿಸಿಕೊಂಡರು. ಇದೆರಡಕ್ಕೂ ಬುದ್ಧಿ / ಹಣ ಇಲ್ಲದ ಗಾಂಧಿನಗರದ 111ನೆಯ ಕ್ರಾಸಿನವರು ಹಾಹಾಕಾರಪಟ್ಟರು.

ಇದೇ ಸಂದರ್ಭದಲ್ಲಿ, ಅದೇ ಓಣಿಯಲ್ಲಿ ಒಂದು ರೂಂ ಮಾಡಿಕೊಂಡಿದ್ದ, ಕೆದರು ಕೇಶಿ, ಸೋಡಾ ಗ್ಲಾಸ್ ಚಸ್ಮದ ಕದರು ಕಡ್ಡಿ ಹಾಗಿದ್ದ, 'ಕೆಂಡ' ಪತ್ರಿಕೆಯ ವರದಿಗಾರ, ಕೋದಂಡು ಒಂದು ಸುದ್ದಿ ತಂದ. ಆ ಕ್ರಾಸಿಗೆ ಸರ್ಕಾರದವರು ಒಂದು ಬೇರ್‌ವೆಲ್ ತೋಡಿಸುವ ಸುದ್ದಿ....ಬಿಸಿ ಸುದ್ದಿ.

"ಕಾವೇರಿ, ಅವಳ ಅಕ್ಕ–ತಂಗಿ ಕೃಷ್ಣೆ–ಗೋದಾವರಿಯರು ಬತ್ತಿದರೂ ಕೂಡ ನೀವು ಏನೂ ಭಯಪಡಬೇಕಾಗಿಲ್ಲ ಸಾತಕ್ಕ. 'ಜಲೇಸ್ಮಿನ್ ಬೋರ್‌ವೆಲ್ ಕುರು' ಅಂತ, ನಮ್ಮ ಈ ರಸ್ತೆಗೆ, ನಿಮ್ಮ ಮನೆಯ ಮುಂದೆಯೇ ಜಲತರಂಗಿಣಿ ಬೋರ್ ವೆಲ್ ಸ್ಥಾಪನೆಯಾಗುತ್ತೆ. ಇನ್ನೂ ನೆಮ್ಮದಿಯಾಗಿರಿ" ಎಂದು ಅದೇ ಲೈನಿನ ಮಧ್ಯದ ಮನೆಯಲ್ಲಿದ್ದ, ವಿತಂತು, ಗೂರಲು ಮುದುಕಿ ಸಾವಿತ್ರಮ್ಮನಿಗೆ ವರದಿ ಒಪ್ಪಿಸಿದ ಕೋದಂಡು. ವರ್ತಮಾನ ಪತ್ರಿಕೆಯ ಪ್ರಚಾರಕ್ಕಿಂತ ಮಿಗಿಲಾದದು

ಸಾತಕ್ಕನ ಬೊಚ್ಚು ಬಾಯಿ. ಆದರ ಲೇಖನಿಗಿಂತ ಹರಿತ ಸಾತಕ್ಕನ ನಾಲಿಗೆ. ಕೋದಂಡು ಬಾಯಿ ತೆರೆಯುವ ಮೊದಲೇ, 111ನೇ ಕ್ರಾಸಿಗೆ ಬೋರ್‌ವೆಲ್ ಬರುವ ಸುದ್ದಿ, ಆದರ ಪ್ಯಾರಲಲ್ ಕ್ರಾಸುಗಳಿಗೆಲ್ಲಾ ತಿಳಿದು ಹೋಯಿತು, ಕ್ರಾಸಿನ 28 ಮನೆಗಳಿಗೆ ಈ ಸುದ್ದಿ ಖುಷಿ ಕೊಟ್ಟಿದ್ದರೆ. ಆ ಕಡೆ ಕೊನೆಯಲ್ಲಿದ್ದ ಮಾಜಿ ಮುನಿಸಿಪಲ್ ಕೌನ್ಸಿಲರ್ ಭುಜಂಗರಾಯನ ಹಾಗೂ ಈ ಕಡೆ ತುದೀಲಿದ್ದ, ರಿಟೈರ್ಡ್ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಮೆಣಸಿನಕಾಯಿಯವರ ಮೂಗಿಗೂ ಘಾಟು ತಗುಲಿತ್ತು.

ಕೈಚೀಲ ಹೆಗಲಿಗೆ ತೂಗಿಸಿಕೊಂಡು, ಕಮಟು ಜುಬ್ಬಾ ಧರಿಸಿದ ಕೋದಂಡು ವನ್ನು ಭುಜಂಗರಾಯರು, ಆಕಸ್ಮಿಕವೆಂಬಂತೆ ರಸ್ತೆಯಲ್ಲಿ ಭೇಟಿಯಾಗಿ, "ಏನ್ರೀ, ಬೋರ್‌ವೆಲ್ ಎಲ್ಲಿ ಹಾಕ್ತಾರಂತೆ?" ಎಂದು ಪ್ರಶ್ನಿಸಿದರು. "ಇನ್ನೆಲ್ಲಿ ಸಾರ್ ಇರೋದು ಒಂದೇ ಸ್ಥಳ. ಎಲ್ಲಾರ್ಗೂ ಅನುಕೂಲವಾಗೋ ಹಾಗೆ, ರಸ್ತೆ ಮಧ್ಯ ಭಾಗದಲ್ಲಿರೋ ಸಾತಕ್ಕನ ಮನೇ ಮುಂದೇನೆ," ಎಂದ ಕೋದಂಡು.

"ಏನ್ರೀ, ನಿಮಗೆ ತಲೆ ಕೆಟ್ಟಿಲ್ಲ ತಾನೆ? ನಾನು ಮಾಜಿ ಕೌನ್ಸಿಲ್ಲರ್ರು ಇದೇ ಕ್ರಾಸಿನಲ್ಲಿರೋವಾಗ, ಆ ಗೂರಲು, ಮನೆ ಮುಂದೆ ಬೋರ್‌ವೆಲ್ ಹಾಕ್ತಾರೆ ಅಂತ ಹೇಳ್ತೀರಲ್ಲಾ. ನಿಮಗೇನು ತಲೆ ರಿಪೇರಿಯಾಗಬೇಕೋ ಹೇಗೆ?" ಎಂದು ಭುಜಂಗ ರಾಯರು ಅಟಕಾಯಿಸಿಕೊಂಡರು.

ವಿಶ್ರಾಂತ ಸಬ್ ಇನ್ಸ್‌ಪೆಕ್ಟರ್ ಮೆಣಸಿನಕಾಯಿಯವರು ಹಾರಾಡಿದ್ದೇ ಬೇರೆ ತರಹ. ಏನು ಮಾಜಿ ಕೌನ್ಸಿಲರ್ ಅಂತಂದ್ರೆ ಏನೂಂತ ತಿಳಿದಾನೆ ಆ ಮಗ ಭುಜಂಗ. ನಾನು ಸರ್ವೀಸನಾಗೆ ಇದ್ದಾಗ,. ಇಂಥೋರು ಮಣ್ಣು ತಿಂದು ನೆಲ ಕಚ್ಚಿದಾಗ, ಲಾಕಪ್‌ನಾಗೆ ಕೂಡಿ, ಬೂಟು ಕಾಲಿಂದ ಒದ್ದದ್ದೂ ಅದೆ ಬಿಡ್ರಿ,, ನೀವು ಯಾವುದಕ್ಕೂ ಕಾಳಜಿ ಮಾಡಬ್ಯಾಡ್ರಿ 'ಕೆಂಡ' ಅವರೆ... "ಕೆಂಡ ಅಲ್ಲ ಸಾರ್. ಅದು ಪತ್ರಿಕೆ ಹೆಸರು. ನನ್ನ ಹೆಸರು ಕೋದಂಡ...."

"ಯಾವುದೋ ಒಂದು ಪಿಂಡ. ಇರಲಿ ಬಿಡ್ರಿಯಪ. ಆದ್ರೆ ಒಂದು ಮಾತು ಖರೆ. ಹ್ಯಾಂಗ ಆ ಭುಜಂಗನ ಮನೀ ಮುಂದೆ ಬೋರ್‌ವೆಲ್ ಬರ್ತದೋ ನಾನೂ ನೋಡ್ತೀನಿ. ನಾನೇನೂ ಬಳೆ ತೊಟ್ಟು ಕುಂತಿಲ್ರೀ. ಆ ಮುದಿ ಸಾವಂತ್ರಿ ಮನೀ ಮುಂದಾಗಲಿ, ಆ ಪುಢಾರಿ ಭುಜಂಗನ ಮನೀ ಮುಂದಾಗಲಿ ಬೋರ್‌ವೆಲ್ ತೆಗೆಸಿದ್ರೆ ಪರಿಣಾಮ ನೆಟ್ಟಗಾಗೋದಿಲ್ರಿಯಪ. ನನಗೇನು ವಶೀಲಿ ಇಲ್ಲೇನ್ರಿ. ಸಚಿವರು ನಮ್ಮೋರು ಇರುವಲ್ಲ್ಯಾಕೆ. ಕಲ್ಯಾಣ ಮಂತ್ರಿ ಆಲೂಗೆಡ್ಡೆಯವರು ನಮ್ಮ ಕಡೆಯೋರು, ನಮ್ಮ ಪೈಕೀನೆ. ಖರೇ ಅಂದ್ರೆ ಬೋರ್‌ವೆಲ್ ನಮ್ಮ ಮನೀ ಮುಂದೇನೆ ಹಾಕ್ಬೇಕು" ಎಂದು ವಿಶ್ರಾಂತ ಯಾಮಿಕ ಅಧಿಕಾರಿ ಮೆಣಸಿನಕಾಯಿಯವರ ಆರ್ಭಟ.

ಈ ಕರಟಕ, ದಮನಕರ ಹೋರಾಟದಿಂದ ರಸ್ತೆಗೆ ಬರಬೇಕಾಗಿದ್ದ ಬೋರ್ ವೆಲ್ ಬರಲೇ ಇಲ್ಲ. ರಸ್ತೆಯ ವಾಸಿಗಳಾಗಿದ್ದ ಇತರೆ ಸಾರ್ವಜನಿಕರು, ಕೋದಂಡು ವನ್ನು ಲೇಟೆಸ್ಟ್ ಸುದ್ದಿಗಾಗಿ ಕಾಡಿದರು. ಈ ಕಾಟ ಸಹಿಸಲಾಗದೆ ಕೋದಂಡು ಬೋರ್‌ವೆಲ್ ಆಫೀಸಿಗೆ ಹೋದ. ವಿಚಾರಿಸಿದ.

"ನೋಡ್ರಿ 111ನೇ ಕ್ರಾಸಿನಲ್ಲಿರೋದು 30 ಮನೆಗಳು. ಆದರೆ ಮೂಗರ್ಜಿ ಬಂದಿರೋದು 35. ಭುಜಂಗರಾಯರ ಮನೆ ಮುಂದೆ ತೋಡಿಸೋಕ್ಕೆ 15 ಅರ್ಜಿಗಳು, ಮೆಣಸಿನಕಾಯಿ ಅವರ ಮನೆ ಮುಂದೆ ತೋಡಿಸೋಕ್ಕೆ 20 ಅರ್ಜಿಗಳು ಬಂದಿವೆ. ಈ ಅಹವಾಲುಗಳ ತಪಾಸಣೆಯಾಗಿ, ಇತ್ಯರ್ಥವಾಗುವವರೆಗೂ ನಾವು ಯಾವ ಹೇಳಿಕೆಯನ್ನೂ ಪತ್ರಿಕೆಗಳಿಗೆ ಕೊಡಲಾಗುವುದಿಲ್ಲ" ಎಂದು, ಅಲ್ಲಿಯ ಅಧಿಕಾರಿ, ಖಂಡತುಂಡವಾಗಿ ಪತ್ರಿಕಾ ಪ್ರತಿನಿಧಿ ಕೋದಂಡುವಿಗೆ ಕೊಟ್ಟ ಉತ್ತರ.

ಪತ್ರಿಕೆಯ ಯೋಗ್ಯತೆ, ಅಥವಾ ಅದರ ಪ್ರತಿನಿಧಿಯ ಯೋಗ್ಯತೆ ಏನೇ ಇರಲಿ, ಅವನ ವಾಸನಾಗ್ರಹಣ ಶಕ್ತಿ ಅತಿ ತೀಕ್ಷ್ಣವಾಗಿರುವುದರಲ್ಲಿ ಅನುಮಾನವೇ ಇಲ್ಲ. ಪೊಲೀಸು ವಾಸನಾ ನಾಯಿಗಳಿಗಿಂತ ಬೆಟರ್ರು. ಈ 35 ಮೂಗರ್ಜಿಗಳ ಹಿಂದಿರುವ ಕೈವಾಡ, ಒಂದು ಭುಜಂಗರಾಯನದು, ಇನ್ನೊಂದು ಮೆಣಸಿನ ಕಾಯಿಯದು, ಎಂಬುದನ್ನು ಕಂಡುಕೊಂಡ, ಕೋದಂಡ. ಇವರಿಬ್ಬರ ರಿಪೇರಿಗೆ ಪಣ ತೊಟ್ಟ. ಪತ್ರಿಕೋದ್ಯಮಿ ಅರ್ಧ ಸಾಹಿತಿ, ಅರ್ಧ ಓದುಗ. ನಾಯ್ಡು ಬಾರಿನಲ್ಲಿ ಒಂದು ಕ್ವಾರ್ಟರ್ ರಮ್ ಏರಿಸಿದ ಮೇಲೆ ಅವನಿಗೆ ಪಂಚತಂತ್ರದ ಕಥೆಗಳ ಬಗ್ಗೆ ದೃಷ್ಟಿ ಹೊರಳಿತು. ಕರಟಕ ದಮನಕರ ಹಾವಳಿಯನ್ನು ತಹಬಂದಿಗೆ ತರುವ ಉಪಾಯವೂ ಹೊಳೆಯಿತು.

ಮಾರನೆಯ ದಿನ ಮುಂಜಾನೆಯೇ ಮಾಜಿ ಸಬ್ ಇನ್ಸ್‌ಪೆಕ್ಟರ್ ಮೆಣಸಿನ ಕಾಯಿಯವರ ಮನೆಯ ಮುಂದಿದ್ದ ಕರೆ ಘಂಟೆಯನ್ನು ಒತ್ತಿದ. ಬಾಗಿಲು ತೆರೆದದ್ದು ಒಬ್ಬಳು ಜವ್ವನಿ.

"ಬರ್ರಿ... ಒಳಾಕೆ ಬರ್ರಿ... ಅವರು ಝಳಕ ಮಾಡ್ತಾ ಅದಾರೆ. ನೀವು ಕುಂಡ್ರಿ, ಪರವಿಲ್ಲ ನಾವು ಮಾತಾಡೋಣ. ಅವರು ತಡವಾಗಿ ಬಂದ್ರೂ ತ್ರಾಸಿಲ್ಲ." ಎಂದು ಆಕೆ ಸೆರಗು ಹಾಯಿಸಿ, ಎದುರಿದ್ದ ಸೋಫಾವನ್ನು ತೋರಿಸಿದಾಗ, ಕೋದಂಡುಗೆ ರೋಮಾಂಚನವಾಯಿತು. ಆದರೆ ಬಚ್ಚಲು ಮನೆ ಬಾಗಿಲು ರಪ್ಪನೆ ತೆಗೆದುಕೊಂಡು, ನಡುವಿಗೆ ಟವಲನ್ನು ಸುತ್ತಿಕೊಂಡು, ಅರೆ ನಗ್ನರಾಗಿದ್ದ ಮೆಣಸಿನಕಾಯಿಯವರು 60 ಮೈಲಿ ಸ್ಪೀಡಿನಲ್ಲಿ ಆಗಮಿಸಿ, ಕೋದಂಡುವನ್ನು

ನೋಡಿ ಸಿಡಿಪಿಡಿ ಮಾಡಿದಾಗ, ಅವನು ಅಯೋಮಯ ಸ್ಥಿತಿಯಿಂದ ಯಥ ಸ್ಥಿತಿಗೆ ಮರಳಿದ. ಅವರು ಆ ಜವ್ವನಿಗೆ, ತಮ್ಮ ಮೂರನೆ ಹೆಂಡತಿ ಇನ್ನೂ ಸೆರಗನ್ನು ತಿರುವುತ್ತಾ ನಿಂತಿರುವುದನ್ನು ನೋಡಿ, "ನೀ ಓಗಿ ಕೆಲಸ ನೋಡು ನಾನು ಇವರ ತಾವು ಪ್ರಿವೆಟ್ಟಾಗಿ ಮಾತಾಡೋದದ" ಎಂದು ಹೆಂಡತಿಗೆ ತಾಕೀತು ಮಾಡಿದರು.

"ಅಯ್ಯೋ, ಅವರಿರಲಿ ಬಿಡಿ ಸಾರ್. ಅಂತ ತಲೇ ಹೋಗೋ ಅಂತ ಪ್ರ್ಯವೆಸಿ ಏನಿದೆ ನಮ್ಮ ಮಾತಿನಲ್ಲಿ" ಎಂದು ಕೋದಂಡು, ಗೋಗರೆದಾಗ, ಮೆಣಸಿನ ಕಾಯಿಯವರು ಮತ್ತಷ್ಟು ರಂಗಾಗಿ, ಬ್ಯಾಡಗಿ ಮೆಣಸಿನಕಾಯಿಯ ಹಾಗೆ ಕೋದಂಡುವಿಗೆ ಕಾಣಿಸಿದರು. ಅವರ ಖಾರ ಸ್ವಲ್ಪ ತಗ್ಗಿದ್ದು .ಅವರ ಹೆಂಡತಿ ಒಳಗೆ ಹೋದ ಮೇಲೆಯೆ.

"ಏನಪಾ ತಮ್ಮ ಯಾಕ ಬಂದೀ ಈ ಅವೇಳೆನಾಗೆ."

"ಏನಿಲ್ಲಾ ಸಾರ್, ಆ ಬೋರ್‌ವೆಲ್ ವಿಚಾರ...."

"ಏನಿದೆ ಆದರ ವಿಚಾರ....?"

"ನೋಡಿ ಸಾರ್, ನೀವು 20. ಭುಜಂಗರಾಯರು 10 ಮೂಗರ್ಜಿಗಳನ್ನು ಬರೆದು ಹಾಕಿದ ಮೇಲೆ 'ಈ ರಸ್ತೆಗೆ ಬೋರ್‌ವೆಲ್ ಕೊಡಲೇಬಾರದು' ಅಂತ ತೀರ್ಮಾನಕ್ಕೆ ಬರ್ತಿದಾರೆ. ಆದಕ್ಕೇ ಇಷ್ಟೊಂದು ಡಿಲೇ ಆಗಿರೋದು"
"ಅಲ್ರೀ, ಮಾಜಿ ಕೌನ್ಸಿಲರ್‌ಗೆ ಏನು ಕಿರೀಟ ಐತೇನ್ರಿ. ಬೋರ್‌ವೆಲ್ ಅವನ ಮನೀ ತಾವು ಯಾಕೆ ಆಗಬೇಕು?"

ಕೋದಂಡು ಉಗುಳು ನುಂಗಿದ. ಜಗ್ಗೋಕುಳ ಅಲ್ಲ ಇದು ಎಂಬುವುದು ಅವನಿಗೆ ಮನವರಿಕೆಯಾಯಿತು. ಕಡೇ ತುರಫನ್ನು ಒಗದೇಬಿಟ್ಟ. "ಸ್ವಾಮಿ, ನಿಮ್ಮ ಮನೆ ಮುಂದೆ ಬೋರ್‌ವೆಲ್ಲಾದರೂ, ಅಥವಾ ಭುಜಂಗರಾಯರ ಮನೆ ಮುಂದೆ ತೆಗೆದರೂ, ಇಬ್ಬರಿಗೂ ಅಪಾಯ ಕಾದಿದೆ ಸ್ವಾಮಿ" ಕೋದಂಡು ಒಂದೊಂದೇ ಪದವನ್ನು ಪತ್ತೇದಾರಿ ಧಾಟಿಯಲ್ಲಿ ನಿಧಾನವಾಗಿ ಉಸುರಿದಾಗ, ಮೆಣಸಿನಕಾಯಿ ಹೌಹಾರಿದರು. "ಅಪಾಯ ? ಯಾಕ್ರಪಾ, ಯಾವದಾರ ಬೋರ್‌ವೆಲ್ ಟೆರರಿಸ್ಟುಗಳಾದಾರ ಏನ್ರಪಾ. ಮೂನಿ, ಗೀನಿ ಕಾರಭಾರ ನಡಸವ್ರು...."

"ಅಯ್ಯೋ ಅಂಥಾ ಅಪಾಯ ಸಧ್ಯಕ್ಕಿಲ್ಲ, ಸ್ವಾಮಿ. ಆದ್ರೆ ಪಡ್ಡೆ ಹುಡುಗರ ಅಪಾಯ...."

"ಹಂಗಂದ್ರ ?" ಮೆಣಸಿನಕಾಯಿ ಹುಬ್ಬೇರಿಸಿದರು.

"ಸ್ವಾಮಿ, ವಿದ್ಯಾರ್ಥಿಗಳು ರೂಂಗಳನ್ನ ಬಾಡಿಗೆಗೆ ಹಿಡಿದಿರೋದು ನಿಮಗೆ ಗೊತ್ತೇ ಇದೆ. ಈ ರಸ್ತೇಲಿ ಅಂತ 13 ರೂಂಗಳಿವೆ. ಒಂದೊಂದು ರೂಂಗೂ ಇಬ್ಬಿಬ್ಬರಂತೆ 26 ಪಡ್ಡೆ ಹುಡುಗರು ನಮ್ಮ ಬೀದೀಲೇ ಇದಾರೆ ಸ್ವಾಮಿ. ನೀವು ನಿಮ್ಮಾಕೇನ ಸವದತ್ತಿಯಿಂದ ಇಲ್ಲಿಗೆ ತಂದಿದೀರಿ...., ಮಧ್ಯಕ್ಕೆ ನಿಲ್ಲಿಸಿ ಕೋದಂಡು ಅಡುಗೆಯ ಕೋಣೆಕಡೆ ಕಣ್ಣು ಹಾಯಿಸಿದಾಗ, ಅವನನ್ನು ಬೆಲ್ಟಿನಿಂದ ಹೊಡೆಯುವ ಮನಸ್ಸಾಯಿತು. ಆದರೂ ತಾಳ್ಮೆ ತಂದುಕೊಂಡು,

"ಅದಕ್ಕೂ, ಬೋರ್‌ವೆಲ್‌ಗೂ ಏನಪಾ ಸಂಬಂಧ?" ಎಂದು ಪ್ರಶ್ನಿಸಿದರು.

"ಸ್ವಾಮಿ, ನಿಮ್ಮ ಮನೆ ಮುಂದೆ ಬೋರ್‌ವೆಲ್ಲಾದರೆ, ಆ 26 ಮಂದಿ ಪಡ್ಡೆ ಹುಡುಗರೆಲ್ಲಾ, ನೀರು ತುಂಬಿಸಿಕೊಳ್ಳೋಕೆ ಬಕೀಟು ಹಿಡಿದು, ನಿಮ್ಮ ಮನೇ ಮುಂದೇನೆ ಇರ್ತಾರೆ. ಸ್ವಾಮಿ ಒಬ್ಬೊಬ್ಬ ವಿದ್ಯಾರ್ಥಿಗೂ 30 ನಿಮಿಷ ನೀರು ಹಿಡಿಯುವುದಾದರೆ, 26ರ 30ಲ ಎಷ್ಟು ಸ್ವಾಮಿ? ಸುಮಾರು 12 ಘಂಟೆಗಳ ಕಾಲ, ಈ ಪಡ್ಡೆ ಹುಡುಗರು, ನೀರು ಹಿಡಿಯೋ ನೆಪದಲ್ಲಿ ನಿಮ್ಮ ಮನೆ ಮುಂದೆ ಕ್ಯೂ ಹಚ್ಚಿ ನಿಂತಾಗ.... ಅರ್ಥಗರ್ಭಿತವಾಗಿ, ಮಾತಿಗೆ ಅರ್ಧ ವಿರಾಮ ಹಾಕಿ ಕೋದಂಡು, ಮೆಣಸಿನಕಾಯಿಯವರ ಮುಖ ನೋಡಿದಾಗ, ಅವರಿಗೇರಿದ್ದ ಖಾರ ಪೂರ್ಣವಾಗಿ ಇಳಿದಿತ್ತು. ಮೆಣಸಿನಕಾಯಿಯ ಕೆಂಪು ಬಣ್ಣ ಹಳದಿಗೆ ತಿರುಗಿತ್ತು.

"ಖರೇ ಹೇಳಿದಿರಿ ಸಾರ್ ನೀವು. ಗೂರ್‍ಲು ಮುದಕಮ್ಮನಿಗೆ ತ್ರಾಸ ಆಗ್ತಾಬರ‍್ದು ನೋಡ್ರಿಯಪ್ಪ. ಅವರಿಗೆ ತ್ರಾಸಾದ್ರೆ ಸಿವ ಮೆಚ್ಚತವ್ನ. ನನ್ನ ಆಬ್ಜಕ್ಷನ್ ನಾನು ವಾಪಾಸು ತಗಂತೀನಿ. ಸಾವಂತ್ರಕ್ಕನೋರ ಮನೀ ಮುಂದೇನೆ ಬೋರ್‌ವೆಲ್ ತೋಡಿಸ್ಬಿಡ್ರಿ" ಎಂದು ಮೆಣಸಿನಕಾಯಿಯವರು ಆಶ್ವಾಸನೆ ಕೊಟ್ಟಾಗ, ಅಡುಗೆ ಮನೆಯಿಂದ ಹೊರಬಂದ ಅವರ ಮೂರನೆ ಹೆಂಡತಿ ಕೋದಂಡುವನ್ನೇ ತಿನ್ನುವ ಹಾಗೆ ನೋಡಲು ಶುರು ಮಾಡಿದಾಗ, ಮೆಣಸಿನಕಾಯಿಯವರಿಗೆ ಸಹನವಾಗದೆ, ಕೂಡಲೇ ಕೋದಂಡುವನ್ನು ಆಚೆಗೆ ಸಾಗಿಸಿ, ಬಾಗಿಲು ಹಾಕಿಕೊಂಡರು.

ಭುಜಂಗರಾಯರಿಗಿದ್ದ ಪ್ರಾಬ್ಲಮ್ಮು ಅವರ 30 ವರ್ಷ ಪ್ರಾಯದ, ಅವಿವಾಹಿತ ಕನ್ಯೆ. ಅಲ್ಲ, ಅಲ್ಲ, ಅವಿವಾಹಿತ ಮಗಳು. ಭಾಷೆಯಲ್ಲಿ ನಿಖರತೆ ಬೇಡವೆ ? ಭುಜಂಗರಾಯರಿಗೂ ಕೋದಂಡು, ಬೋರ್‌ವೆಲ್ ಅವರ ಮನೆ ಮುಂದೆ ತೆಗೆದರೆ ಆಗುವ ಪರಿಣಾಮವನ್ನು ರಸವತ್ತಾಗಿ ವರ್ಣಿಸಿದಾಗ, ಅವರೂ ತಥಾಸ್ತು ಎನ್ನಲೇಬೇಕಾಯ್ತು.

ಆ ದಿನವೇ ಸರ್ವತ್ರ ಏಕಾದಶಿ. ಜಲೋದಕ ಬಿಟ್ಟು ಸಾತಕ್ಕ ಏನೂ ಮುಟ್ಟುವಂತಿಲ್ಲ. ಬೋರ್‌ವೆಲ್ ಇಷ್ಟಾದರೂ ಇನ್ನೂ ಬಂದಿರಲಿಲ್ಲ. ಆವತ್ತೇ ಖಾಳು ಮಂಗಳವಾರ. ನೀರಿಲ್ಲದ ದಿನ. ಸಾತಕ್ಕನ ಗತಿ,....?

11

ಫಸ್ಟ್ ಲವ್

ಕಮಲಾ ರಾಮಸ್ವಾಮಿ

ಫ್ಯಾನ್ ನಿಧಾನವಾಗಿ ತಿರುಗುತ್ತಿತ್ತು. ಶೀಲೂಗೆ ಇನ್ನೂ ಜ್ಞಾನ ಬಂದಿರಲಿಲ್ಲ. ಡ್ರಿಪ್ಸ್ ಹಾಕಿತ್ತು. ಒಳಗೆ ಬಂದ ಡ್ಯೂಟಿ ಡಾಕ್ಟರ್ ಡ್ರಿಪ್ಸ್ adjust ಮಾಡಿ ಹೋದರು. ನರ್ಸ್ ಒಂದು ಬಿ. ಪಿ. ಚೆಕ್ ಮಾಡಿದಳು.

ನಿಶ್ಶಬ್ದ, ನೀರವ ವಾತಾವರಣ. "ಈಗಿನ ಕಾಲದ ಆಪರೇಷನ್ ಏನು ? It is safer than a train journey'' ಅಂತೆಲ್ಲಾ ಅಂದರೂ, ಅದು ಆದಾಗ, ಎಲ್ಲಾ ನೆಟ್ಟಗಾಗುವ ತನಕ ಆಗುವ ಅನುಭವವೇ ಬೇರೆ. ಶೀಲೂವಿನ ತಾಯಿ ತುಂಬಾ tense ಆಗಿದ್ದರು. ಗಂಡ ಸುಧೀರ ತುಂಬಾ ನರ್ವಸ್ ಆಗಿದ್ದರೂ ತೋರ್ಪಡಿಸಿಕೊಳ್ಳದೆ ಅತ್ತಿಂದ ಇತ್ತ ಕಾರಿಡಾರಿನಲ್ಲಿ ಓಡಾಡುತ್ತಿದ್ದ.

ಅಷ್ಟರಲ್ಲೇ Operation ನಡೆಸಿದ ಸರ್ಜನ್ ಬಂದರು. ಹಿಂದೆಯೇ ಬಂತು ಅವರ ಸಿಬ್ಬಂದಿ. ನಾವು ರೂಮಿನ ಆಚೆ ಬಂದೆವು. ಎಲ್ಲರೂ ಮಂಚದ ಸುತ್ತ ನಿಂತರು. ಆಚೆ ಬಂದಾಗ ಸರ್ಜನ್ ಸುಧೀರನ ಕೈ ಕುಲುಕಿ ''She is fine. Nothing to worry'' ಅಂದರು. ತಾಯಿ ಕಡೆ ತಿರುಗಿ "ಏನೂ ಭಯವಿಲ್ಲಮ್ಮ. ಎಚ್ಚರವಾದ ಮೇಲೆ ಎರಡು ಘಂಟೆಗಳ ಕಾಲ ನೀರು, ಕಾಫಿ ಇತ್ಯಾದಿ ಕೊಡಬೇಡಿ. ಅನಂತರ ಡ್ಯೂಟಿ ಡಾಕ್ಟರ್ ಬಂದು ನೋಡಿ ಹೇಳಿದ ಮೇಲೆ ಆಹಾರ ಕೊಡಿ" ಎಂದು ಹೇಳಿ ಹೊರಟರು.

"ದೇವರ ದಯೆ ! ಗಂಡಾಂತರ ಕಳೀತು. ಆಸ್ಪತ್ರೆ ಮುಖನೇ ನೋಡ್ದೆ ಇದ್ದ ನಮ್ಮ ಶೀಲೂಗೆ ಇದ್ದಕ್ಕಿದ್ದ ಹಾಗೆ ಆಪರೇಷನ್ ಅಂದ್ರೆ ಗ್ರಹಚಾರ ಅಲ್ಲೇ ಮತ್ತೇನು ? ಸಧ್ಯ ! ಕಳೀತಲ್ಲಾ ! ನಂಜುಂಡೇಶ್ವರನ ದಯೆ" ಅಂತ ಕಣ್ಣೊರಿಸಿ ಕೊಂಡರು.

ಸುಧೀರ ರೂಮಿನಲ್ಲಿ ಇಣುಕಿದ. ಶೀಲು ಶಾಂತಳಾಗಿ ನಿದ್ರಿಸುತ್ತಿದ್ದಳು. ಇವನ ಮುಖದಲ್ಲಿದ್ದ ಆತಂಕ ಕಡಿಮೆಯಾಗಿ, ಗೆಲುವು ಮೂಡಿತು. ತುಂಟತನದಿಂದ ನಮ್ಮಿಬ್ಬರನ್ನೂ ನೋಡಿದ. ತಕ್ಷಣ "ಶೀಲು ಜ್ಞಾನ ಬಂದ ಕೂಡಲೇ ಯಾರನ್ನು ಕೇಳುತ್ತಾಳೋ, ನೋಡಬೇಕು" ಎಂದ.

"ಖಂಡಿತ ಅವಳು 'ಸುಧೀರ' ಅಂತ್ಲೇ ಏಳುತ್ತಾಳೆ ನೋಡು. ನೀನು ಅಂದ್ರೆ ಸಾಕು. ಪಂಚಪ್ರಾಣ. ಒಂದು ದಿನಾನೂ ನಿನ್ನ ಬಿಟ್ಟಿರಲಾರಳು." ಮಗಳು ಮಹಾ ಪತಿವ್ರತೆ ಎನ್ನುವಂತೆ ಹೇಳಿದರು ಶೀಲೂ ತಾಯಿ.

"ಇಲ್ಲಾರಿ ಅವಳ ಮೊದಲು ಕೇಳುವುದು ಪಾಪುವನ್ನೇ! ತಾಯ ಒಲವು Instinctive. ಮೊದಲೇ Operation ಅಂದ್ರೆ ಭಯ ಆಗಿರುತ್ತೆ. ಮಗುವಿನ ಮುಖ ನೋಡುತ್ತೇನೋ ಇಲ್ವೋ ಅಂತ ಮನದಾಳದಲ್ಲಿ ಭಯ ಇದ್ದೇ ಇರುತ್ತೆ. ಇದರ ಗತಿ ಏನು ಎನ್ನೋ ಚಿಂತೆ ಇಲ್ದೆ ಇರುತ್ಯೆ ? ಅವಳು ಕೇಳೋದು ಪಾಪುನ್ನೇ" ದೃಢ ನಿಶ್ಚಯದಿಂದ ಹೇಳಿದೆ. "ಬೆಟ್ ಕಟ್ತೀರೇನರೀ. ನನ್ನ ಕೇಳಿದರೆ ನೀವು ಅಮ್ಮನಿಗೆ ಹತ್ತು ರೂಪಾಯಿ ಕೊಡಿ. ಪಾಪುನ್ನ ಕೇಳಿದರೆ ಅಮ್ಮ ನಿಮಗೆ ಹತ್ತು ರೂಪಾಯಿ ಕೊಡಬೇಕು. "ಸುಧೀರನ ಹಿಂದಿನ ಚೈತನ್ಯ ಬಂದಿತ್ತು. Tense ಆಗಿದ್ದ situation ತಿಳಿಗೊಂಡಿತ್ತು.

ಅಷ್ಟು ಹೊತ್ತಿಗೆ ಆಯಾ, ನರ್ಸ್ ಬಂದರು. ಆ ನರ್ಸ್ Pulse ಹಿಡಿದು ನೋಡುತ್ತಿದ್ದಾಗ ಶೀಲೂ ನಿಧಾನವಾಗಿ ಕಣ್ಣು ಬಿಟ್ಟಳು. ನಾವೆಲ್ಲಾ ಸದ್ದಿಲ್ಲದಂತೆ ರೂಮಿನೊಳಗೆ ಹೋದೆವು. ಶೀಲಾ ಏನೋ ಹೇಳಿದಳು ಅಂತ ಕಾಣುತ್ತೆ, ನರ್ಸ್ ಬಗ್ಗಿ "ಏನು?" ಅಂತ ಕೇಳಿದಳು.

"ಸರಿ" ಅಂತ ಈ ಕಡೆ ಬಂದರು.

"ಯಾರನ್ನು ನೋಡಬೇಕಂತೆ, Sister?" ಸುಧೀರ ತವಕದಿಂದ ಕೇಳಿದ.

"ಅವರ ಒಂದು ಹಲ್ಲು ಮುಂದಿನದು, ಕಟ್ಟಿಸಿಕೊಂಡಿದ್ದು. ಅನಸ್ತೀಸಿಯ ಕೊಡುವಾಗ ತೆಗೆದಿದ್ದರು. ಅದನ್ನ ಕೇಳಿದರು. ಇಲ್ಲೇ ಇದೆ. ತರುತ್ತೇನೆ"

ಕತ್ತಿಗಿಂತಲೂ ಶ್ರೇಷ್ಠ ಹೌದೇನು ಪೆನ್ನು
ಹಾಗೆಂದು ಪ್ರತಿಭಟನೆ ಕೊಟ್ಟೆವು ಎನ್ನು
ಮೊನ್ನೆ ಹೊಳೆಯಿತು ನಮಗೆ
ಪಾಕಿಗಳ ಪುಂಡಡಗೆ
ಪೆನ್ನಿಗಿಂತಲೂ ಶ್ರೇಷ್ಠ ಅಲ್ಲವೇ ಗನ್ನು

—ಸುಮತೀಂದ್ರ ನಾಡಿಗ

ಕಾಷ್ಟಮಂಡುವಿನಲ್ಲಿ ಕೆಲವು ದಿನ

ಪ್ರಕಾಶ್

ಇದ್ಯಾವ ಜಾಗಾನೋ ಅಂತ ಹುಬ್ಬೇರಿಸಬೇಡಿ! ನೇಪಾಳದ ಕಟಮಂಡು ನಗರದ ನಿಜ ನಾಮ ಅದು! ನಮ್ಮ ದಿನ ಜೀವನದ ಕಾಷ್ಟ ವ್ಯಸನಗಳನ್ನ ಮರೆಯಲು, ಸ್ವಲ್ಪ ದಿನ ಕಟಮಂಡುಗೆ ಹೋಗೋಣ ಅಂತ ನಿರ್ಧಾರ ಆಯ್ತು! ಸರಿ ಸಿದ್ಧತೆಗಳೆಲ್ಲ ನಡೆದವು.

ಬೆಂಗಳೂರು ಏರ್‌ಪೋರ್ಟ್‌ನಲ್ಲಿ ಕುಳಿತಿದ್ದೀವಿ. ಕಲಕತ್ತಾ ವಿಮಾನಕ್ಕೆ ಮುಂಚೆ ಮದರಾಸಿಗೆ ಹೋಗೋರೆಲ್ಲ ಅವರ ವಿಮಾನ ಹತ್ತಿದರು. ಹತ್ತು ನಿಮಿಷದಲ್ಲಿ ಎಲ್ಲಾ ಪೆಚ್ಚು ಮುಖ ಹಾಕಿಕೊಂಡು ವಾಪಸ್ ಬಂದರು! ನಾನು ಮೆಲ್ಲಗೆ ಪಕ್ಕದವನನ್ನ ಕೇಳಿದೆ. ಅವನು ರೇಗಿ. ಯಾರೋ ಬಾಂಬ್ ಸ್ಕೇರ್ ಮಾಡಿದಾರೆ, ಅಂತ ಹಲ್ಲು ಕಡಿದ! ನಾನು ನಡುಗುತ್ತ ಕುಳಿತೆ. ಸದ್ಯ ಕಲಕತ್ತಾ ವಿಮಾನ ಸರಿಯಾದ ಕಾಲಕ್ಕೆ ಹೊರಟಿತು.

ಕಲಕತ್ತಾ ನಿಲ್ದಾಣದಲ್ಲಿ ನಮ್ಮ ಲಗೇಜ್ ಚೆಕ್ ಮಾಡಿದರು, ಸೆಕ್ಯೂರಿಟಿಯವರು. ನನ್ನ ಬ್ಯಾಗೊಂದರಿಂದ ಎರಟು ಟಾರ್ಚುಗಳಲ್ಲಿದ್ದ ಸೆಲ್‌ಗಳು ಹೊರ ಬಂದವು ಇದನ್ನ ವಿಮಾನದಲ್ಲಿ ಬಿಡೋದಿಲ್ಲ ಅಂದ ಆ ಅಧಿಕಾರಿ. ತನ್ನ ಜತೇನೇ ಇಟ್ಟುಕೊಂಡ. ಖಾಲೀ ಟಾರ್ಚು ವಾಪಸ್ ಕೊಟ್ಟ ಅವನು ಸ್ವಂತ ಉಪಯೋಗಕ್ಕಾಗಿ ಸೆಲ್ ಕೊಂಡು ಎಷ್ಟು ವರ್ಷಗಳಾಗಿತ್ತೋ? ಚೆಕಿನ್ ಕೌಂಟರಿಗೆ ಹೋದೆವು. ಫಾರಿನ್ ತೆರಿಗೆ ಕೊಡಬೇಕು ಅಂತ ಇನ್ನೊಂದು ಕೌಂಟರಿಗೆ ಕಳಿಸಿದರು. ಅಲ್ಲ, ನಾವು ಸ್ವಲ್ಪ ದಿನ ಬಡ ಭಾರತದ ಜನಸಂಖ್ಯೆ ಕಮ್ಮಿ ಮಾಡಿದ್ದಕ್ಕೆ ದಂಡ ಬೇರೆ ಯಾಕೆ ಕೊಡಬೇಕು ಅಂತ ಕೋಪ ಬಂತು. ಆದರೆ ಮಾತಿಲ್ಲದೆ ತೆರಿಗೆ ಕೊಟ್ಟು ವಿಮಾನ ಹತ್ತಿದೆವು.

ಕಟಮಂಡು ನಿಲ್ದಾಣ. ಚಿಕ್ಕದಾದರೂ ಚೊಕ್ಕವಾಗಿದೆ. ಅಲ್ಲಿ ನಮ್ಮ ಕುಲ ಗೋತ್ರ ಎಲ್ಲ ಕೇಳುಲ್ಲ! ಸಾಧಾರಣ ಫಾರಂ ಒಂದನ್ನ ಭರ್ತಿ ಮಾಡಬೇಕು, ಅಷ್ಟೆ. ಕಸ್ಟಂಸ್‌ನವರು ನಿಂತಿದ್ದರು ಸಾಲಾಗಿ. ಸೂಟ್‌ಕೇಸ್ ತೆಗೀರಿ ಅಂದರು. ನಂ ದುರದೃಷ್ಟಕ್ಕೆ ಬೀಗದ ಕೈ ತಿರುಗಿಸಿದರೆ, ಅದು ಬೀಗದಲ್ಲೇ ಮುರೀತು! ಬೀಗ ಹೇಗೆ

ತೆಗೆಯೋದು ಈಗ ? ಕಸ್ಟಂಸ್ ಅಧಿಕಾರಿ ಏನು ಅಂದ. ಬೀಗದ ಕೈ [ಮುರಿಧದ್ದು] ತೋರಿಸಿದೆ. ನಕ್ಕ. ಸರಿ, ಹೋಗಿ ಅಂದ. ನಮ್ಮ ಮುಖ ಲಕ್ಷಣಗಳಲ್ಲೇ ಅವನಿಗೆ ಗೊತ್ತಾಗಿರಬೇಕು. ಈ ಬೀಗನೂ ತೆಗೆಯುಕ್ಕೆ ಬರದೇ ಇರೋ ಆಸಾಮಿಗಳು ಸ್ಮಗ್ಲಿಂಗ್ ಹೇಗೆ ಮಾಡ್ತಾರೇ ಅಂತ ! !

ಹೋಟಲಿನವರು ವ್ಯಾನ್ ಒಂದನ್ನ ಕಳಿಸಿದ್ದರು. ಕಟಮಂಡು ನಗರ ನಂ ದೇಶದ ತರಹಾನೇ ! ಸಣ್ಣ ಗಲ್ಲಿಗಳು, ಗಜಿಬಿಜಿ ಜನಸಂದಣಿ, ಹೇರಳವಾಗಿ ದನ ಕರು, ಅದರ ದೆಸೆಯಿಂದ ಸಗಣಿ ಇತ್ಯಾದಿ! ಆದರೆ ಒಂದು ಸೋಜಿಗ ಅಂದ್ರೆ ಅಲ್ಲಿರೋ ಕಾರುಗಳೆಲ್ಲಾ ಜಪಾನಿನ ಟೊಯೋಟಾ, ನಿಸ್ಸಾನ್‌ಗಳು ! ಇದು ಹೇಗೆ ? ಅಂದೆ. ಡ್ರೈವರ್ ಹೇಳಿದ. ಇವೆಲ್ಲ ಜಪಾನಿನ ಸೆಕೆಂಡ್ ಹ್ಯಾಂಡ್ ಕಾರುಗಳು ! ಅವನ್ನೇ ಸ್ವಲ್ಪ ಶೃಂಗಾರ ಮಾಡಿ ಇಲ್ಲಿಗೆ ಮಾರ್‍ತಾರೆ, ಒಂದೂವರೆ, ಎರಡು ಲಕ್ಷಕ್ಕೆ ! ಅವನ್ನೇ ನಾವು ಹತ್ತಿಪ್ಪತ್ತು ವರ್ಷ ಓಡಿಸ್ತೀವಿ ಅಂದ. ಎಲಾ ಜಪಾನಿನ ಬುದ್ಧಿಯೇ ಅಂದುಕೊಂಡೆ. ನಮ್ಮ ದೇಶದ ಕಾರುಗಳೇಕೆ ಇಲ್ಲ ಇಲ್ಲಿ ? ಅಂತ ಕೇಳಿದೆ. ಬಹಳ ದುಬಾರಿ, ಬಾಳಿಕೇನೂ ಬರೋಲ್ಲ ಅವು ಅಂತ ಉತ್ತರ ಬಂತು.

ನಾವಿದ್ದ ಹೋಟಲಿನಲ್ಲಿ ಬಾಗಿಲು ನಾವು ಮುಟ್ಟಿ ಕೊಳೆ ಮಾಡ್ತೀವಿ ಅಂತ ಭಯ ಅವರಿಗೆ. ದೊಡ್ಡ ಗಾಜಿನ ಬಾಗಿಲುಗಳನ್ನ ತೆಗೆಯುಕ್ಕೆ ಅಂತಾನೇ ಒಬ್ಬನ್ನ ನಿಲ್ಸಿದ್ರು. ಅವನ ಕೆಲಸ ಬಹಳ ಕಷ್ಟ. ಪಾಪ ! ಯಾರು ಬಾಗಿಲ ಹತ್ರ ಬಂದ್ರೂ ಹಲ್ಲು ಕಿರೀಬೇಕು, ಗುಡ್ ಮಾರ್ನಿಂಗ್ ಅಥವಾ ಈವ್ನಿಂಗ್ ಅನ್ನಬೇಕು, ಬಾಗಿಲು ತೆಗೆದು ನಿಲ್ಲಬೇಕು. ಅದೆಷ್ಟು ಸಾವಿರಾರು ಸಲ ಬಾಗಿಲು ತೆಗೆದಿದ್ದಾನೋ ಈ ಮಹಾನುಭಾವ—ಗಿನ್ನೆಸ್ ಬುಕ್‌ಗೆ ಯಾಕೆ ಪ್ರಯತ್ನ ಮಾಡಬಾರದು ಅನ್ನಿಸಿತು !

ಆ ಹೋಟಲು ಪ್ರಖ್ಯಾತಿ ಆಗಿರೋದು ಈ ಬಾಗಿಲಿನಿಂದಲ್ಲ ! ಅಲ್ಲಿ ಒಂದು ಕೆಸೀನೋ ಇದೆ ! ಭಾರತದಲ್ಲಿ ಗ್ಯಾಂಬ್ಲಿಂಗ್ (ಅಧಿಕೃತವಾಗಿ!) ಇಲ್ಲದೇ ಇರೋದ ರಿಂದ, ಈ ಕೆಸೀನೋಗೆ ಜನ ನಾ ಮುಂದು, ತಾ ಮುಂದು ಅಂತ ನುಗ್ತಾ ಇರ್‍ತಾರೆ. ಈ ಕೆಸೀನೋಗೆ ಬಾಗಿಲ ಅವಶ್ಯಕತೇನೇ ಇಲ್ಲ ಅಂತ ಅನ್ನಿಸ್ತು ! ಯಾಕೆ ಅಂದ್ರೆ, ಅದು 24 ಗಂಟೇನೂ ಓಪನ್ನು! ನೂರಾರು ಜನ ಲಕ್ಷಾಧಿಪತಿಗಳಾಗ್ತೀವಿ ಅಂತ ಹೋಗಿ, ಬೆಪ್ಪು ಮುಖ (ಹಾಗೂ ಖಾಲೀ ಜೇಬು) ಸಹಿತ ವಾಪಸ್ ಬರ್‍ತಿರ್‍ತಾರೆ ಅಲ್ಲಿ ! ನಾವು ಮಾತ್ರ ಕೈಲಿ ಕಾಸಿಲ್ದೆ ಇದ್ದಿದ್ರಿಂದ ಬರೀ ಈ ಮೂರ್ಖರನ್ನ ನೋಡೋದ್ರಲ್ಲೇ ಸಂತುಷ್ಟರಾದೆವು. ಮುಂದಿನ ಕತೇನ ಬರೋ ತಿಂಗಳ ಅಪ ರಂಜೀಲಿ ಓದೋರಂತೆ !



"ಮಧ್ಯಂತರ ಚುನಾವಣೆ ಪುನಃ ಆಗಬಹುದು ಅನ್ನೊ ಗುಮಾನಿಯಿಂದ ಟಿಕೆಟ್‌ಗೆ ಈಗಿನಿಂದ್ಲೂ ಕ್ಯೂ ನಿಂತಿರೋದು ನೋಡ್ರಿ".

ಕ್ರೀಡಾಪಟುತ್ವ

ಶಿವು

ಎಲೆಕ್ಷನ್ ದಿನದ ಸಂಜೆ. ಕ್ಲಬ್ಬಿನ ಬಾರ್ ಬಿಕೋ ಅಂತಿತ್ತು. ಚುನಾವಣೆ ದಿನ ಬಾರ್‌ಗಳೆಲ್ಲಾ ಬಂದ್ ಅನ್ನೋ ವಿಷಯ ಮರೆತು, ಅಭ್ಯಾಸ ಬಲದಿಂದ ಬಂದು ಬಿಟ್ಟಿದ್ದೆ. ಬಾರ್ ಟೆಂಡರ್ ಗೋಸ್ವಾಮಿ ನನ್ನನ್ನು ನೋಡಿದ. ನನ್ನ ಮುಖದಲ್ಲಿನ ಡೆಸ್ಪರೇಟ್ ಕಳೆ ನೋಡಿ ಅವನಿಗೇನನ್ನಿಸಿತೋ. ಹತ್ತಿರ ಕರೆದ. ಹೋದೆ.

"ಸಾರ್ ಇವತ್ತು ನಿಮ್ಮ ಮಿತ್ರರೆಲ್ಲಾ ಅರುಣ ಸಾರ್ ಮನೇಲಿ ಸೇರಿದ್ದಾರೆ. ನೀವು ಬಂದ್ರೆ ಅಲ್ಲಿಗೆ ಕಳಿಸು ಅಂತ ಹೇಳಿದ್ರು" ಅಂತ ಅವ ಹೇಳಿದ.

ಇಂದಿರಾ ನಗರದಲ್ಲಿ ಅರುಣನ ಮನೆ. ನಾನು ಹೋಗೋ ಹೊತ್ತಿಗೆ ಸಭೆ ಶುರುವಾಗಿ ಮಾತಿನ ಸ್ವಾರಸ್ಯ ತಪ್ಪಿ ಹೋಗುತ್ತೇನೋ ಅಂತ ಆತಂಕದಿಂದಲೇ ಹೋದೆ.

ಡ್ರಾಯಿಂಗ್ ರೂಮಿನಲ್ಲಿ ರಮೇಶ, ರಘು ಕೂತಿದ್ದರು. ಅರುಣ "ಬಾ ಶಿವು" ಅಂತ ಆತ್ಮೀಯತೆಯಿಂದ ಕರೆದು "ದೇವು ಇನ್ನು ಹತ್ತು ನಿಮಿಷದಲ್ಲಿ ರೆಡ್ಡಿ ಜೊತೆ ಬರ್‍ತೀನಿ ಅಂತ ಫೋನ್ ಮಾಡಿದ್ದ, ಅವನು ಬರೋ ಅಷ್ಟರಲ್ಲಿ ನಿನ್ನ ವಿಷ ಏನು ಅಂತ ಹೇಳಿದ್ರೆ, ಒಬ್ಬೊಬ್ಬರಾಗಿ ಸೆಟ್ಲ್ ಡೌನ್ ಆಗಬಹುದು" ಅಂತ ಹೇಳಿದ.

"ಗೊತ್ತೇ ಇದೆಯಲ್ಲ ಅರುಣ, ನನ್ನ ಮಾಮೂಲು. ನಿನ್ನ ಹತ್ತಿರ ಡ್ರಾಫ್ಟ್ ಇಲ್ಲ ಅಂತ ಗೊತ್ತು, ಶಾಂತಿಯುತ ಸಹ ಬಾಳ್ವೆಯ ದ್ಯೋತಕವಾಗಿ ಯು.ಬಿ.ನೋ, ಯು, ಆಲ್ಸೊಬಿನೋ ಕೊಡು" ಅಂದೆ

"ಫ್ರೆಂಚ್ ಓಪನ್ ನೋಡಿದ್ಯಾ ?" ರಘು ರಮೇಶನ ಕಡೆ ತಿರುಗಿ ಕೇಳಿದ

"ನೋಡ್ದೆ ಏನು, ಟಿ.ವಿ. ಮುಂದೆ ಕೂತೋನು, ರಾತ್ರಿವರೆಗೂ ಏಳ್ಲೇ ಇಲ್ಲ, ಅದೆಂಥ ಆಟ. ಏನು ಕಥೆ. ಬಲೇ ಮಜ ಇತ್ತು. ಅಗಾಸಿ ಕೊನೇಗೆ ಸೋಲ್ದೆ ಇದ್ರೆ ಚೆನಾಗಿರ್‍ತಿತ್ತು ಅಂತ ಅನ್ನಿಸ್ತು" ರಮೇಶನ ಅನಿಸಿಕೆ.

"ಸೋಲ್ದೆ ಏನು ? ಸೆಮಿಫೈನಲ್ಸ್ ಗೆದ್ದ ಮೇಲೆ ಅವನ ಸಂದರ್ಶನ ನೋಡ್ಲಿಲ್ವಾ. ಕ್ಯಾಮರಾ ಹಿಡ್ಕೊಂಡು ಪ್ಯಾರಿಸ್‌ನಲ್ಲಿ ರಾತ್ರೆ ಎಲ್ಲಾ ಅಲೆದೆ ಅಂತ ಓಪನ್ನಾಗೇ ಹೇಳಿ ಬಿಡ್ಲಿಲ್ವಾ ಅವನು–ಬಲೇ ಗಾಸಿ–ಅಗಾಸಿ !"

"ಅಲ್ರೋ ಕುರಿಗಳ್ರಾ, ಈ ಫ್ರೆಂಚ್ ಓಪನ್ನು, ವಿಂಬಲ್ಡನ್ನು ಅಂತ ನೋಡ್ತೀರಲ್ಲಾ ಇವೆಲ್ಲಾ ಬರೀ ಬಿಳೀ ತೊಗಲಿನೋರ ಆಟ. ನಮ್ಮ ಭಾರತದಿಂದ ಒಬ್ಬನಾದ್ರೂ ಇಲ್ಲ. ದೇಶಭಕ್ತಿ ಸ್ವಲ್ಪಾನಾದ್ರೂ ಇದ್ದಿದ್ರೆ ನೀವೆಲ್ಲಾ ಹೀಗೆ ಕಕವಗಳ ತರಹಾ ಟಿ. ವಿ. ನೋಡ್ತಾ ಇರ್ತಿಲ್ಲ" ನಾನು ಬೇಕೆಂದೇ ಕೆಣಕಿದೆ.

ಅಷ್ಟು ಹೊತ್ತಿಗೆ ಸರಿಯಾಗಿ ದೇವು ಆಗಮಿಸಿ. ಜೊತೆಯಲ್ಲಿ ರಾಜ, ರೆಡ್ಡಿ, ದೇವು ಮುಖ ಕಂಡೊಡನೆಯೇ ರಮೇಶ ಅವನ ಹತ್ತಿರ ನನ್ನ ಮೇಲೆ ಚಾಡಿ ಹೇಳುಕ್ಕೆ ಶುರು ಮಾಡಿದ.

"ನೋಡು ದೇವು, ಈ ದೇ. ಭ. ಶಿರೋಮಣಿ ಹೇಳೋದನ್ನ, ಫ್ರೆಂಚ್ ಓಪನ್ನಲ್ಲಿ ಭಾರತೀಯರು ಆಡ್ದೇ ಇದ್ರೆ ಅದನ್ನ ನೋಡಿದ್ರೆ ಪಾಪ ಬರುತ್ತಂತೆ. ನಾವೆಲ್ಲಾ ಕಕವಗಳಂತೆ. ಆಟದಲ್ಲೂ ಈ ಸಂಕುಚಿತ ಭಾವನೆ ತಪ್ಪು ಅಂತ ನೀನಾದ್ರೂ ಅವನಿಗೆ ಬುದ್ಧಿ ಹೇಳ್ಬಾರ್ದೇ?"

ದೇವು ನೆರೆದ ಸಭಿಕರನ್ನು ನಿಧಾನವಾಗಿ ನೋಡಿ

"ಏಷ್ಯಾಡ್‌ನಲ್ಲಿ ಭಾರತಕ್ಕೆ ಕಬಡ್ಡಿ ಇವೆಂಟ್‌ನಲ್ಲಿ ಚಿನ್ನದ ಪದಕ ಬಂದಾಗ ಎಷ್ಟು ಜನ ಸಂತೊಷ ಪಡೆದೇ ನಿರ್ಲಿಪ್ತರಾಗಿ ಕೂತಿದ್ರಿ ಹೇಳಿ" ಅಂತ ಕೇಳಿದ.

ಯಾರೂ ಮಾತನಾಡಲಿಲ್ಲ. ಅವನೇ ಮತ್ತೆ ಮುಂದುವರಿಸಿದ.

"ಅದೇ ನೋಡಿ ಶಿವು ಹೇಳ್ತಿರೋದು. ನಮ್ಮ ದೇಶದ ಕೀರ್ತಿ ಪತಾಕೆ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಹಾರಾಡಬೇಕಾದರೆ, ನಮ್ಮ ಕ್ರೀಡೆಗಳನ್ನೇ ಅವರಿಗೆ ಕಲಿಸಬೇಕೇ ವಿನಹ; ಟೆನ್ನಿಸ್, ಐಸ್ ಹಾಕಿ ಅಂತ ನಮಗೆ ಗೊತ್ತಿಲ್ಲದ ಆಟದಲ್ಲಿ ಅವರೊಡನೆ ಸ್ಪರ್ಧಿಸಿ ಗೆಲ್ಲೋದು ಸಾಧ್ಯವೇ"

"ಅಂದ್ರೆ, ಸ್ಟೆಫಿ ಗ್ರಾಫ್, ಮೋನಿಕಾ ಸೆಲ್ಲೆಸ್ ಅರಾಂಕ್ಷಾ ವಿಕಾರಿಯೋ, ಇವರಿಗೆಲ್ಲಾ ಕಬಡ್ಡಿ ಹೇಳಿಕೊಡಬೇಕು ಅಂತೀಯೇನು ?" ರೆಡ್ಡಿ ಅಮಾಯಕನಂತೆ ಕೇಳಿದ.

"ಕಬಡ್ಡಿ, ಕಬಡ್ಡಿ ಅಂತ ಷಾರ್ಟ್ಸ್ ಹಾಕಿಕೊಂಡು ಅರಾಂಕ್ಷಾ ಕೂಗ್ತಾ ಬರೋದು ಊಹಿಸ್ಕೊಂಡ್ರೇ ಮೈಯೆಲ್ಲಾ ಜುಂ ಅನ್ನುತ್ತೆ. ಆದ್ರೆ ನಾನು ಹೇಳ್ತಿರೋದು ಹಾಗಲ್ಲಾ ರೆಡ್ಡಿ, ಭಾರತದ್ದೇ ಹಲವು ಆಟಗಳನ್ನ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರ ಮಾಡಿದರೆ, ನಾವು ಯಾವಾಗ್ಲೂ ಮೇಲುಗೈ ಪಡೆದು, ಚಿನ್ನ ಬೆಳ್ಳಿ ಗಿಟ್ಟಿಸ್ಕೊ ಬಹುದು. B.O.P.ಗೆ ಕೂಡ ಸಹಾಯ ಆಗುತ್ತೆ"

"ಕಬಡ್ಡಿ ಬಿಟ್ರೆ, ನಮ್ಮ ದೇಶದ್ದೇ ಅಂತ ಹೇಳ್ಕೊಳ್ಳೊ ಅಂತಹ ಬೇರೆ ಯಾವ ಆಟ ಇದೆ ದೇವು ?"

"ಇಲ್ದೆ ಇದ್ರೆ ರೂಪಿಸಬೇಕು. ನಮ್ಮ ದೇಶದಲ್ಲಿ ಯಾವುದಕ್ಕೆ ಕಡಿಮೆ ? ಟ್ಯಾಲೆಂಟೇ ? ಉತ್ಸಾಹಾನೇ ? ಜನ ಸಂಖ್ಯೆನೇ ? ಈಗ ನೋಡಿ ಮಾತಾಡ್ತಾ ಇದ್ದ ಹಾಗೇನೇ ನನಗೆ ಮೂರು ಆಟಗಳ ರೂಪು ರೇಷೆ ಹೊಳೀತಾ ಇದೆ. ಒಂದೊಂದ ರಲ್ಲೂ ನಮ್ಮ ದೇಶಕ್ಕೆ ಚಿನ್ನದ ಪದಕ ಸಿಗೋದರಲ್ಲಿ ಸಂಶಯಾನೇ ಇಲ್ಲ"

ಅಷ್ಟು ಹೊತ್ತಿಗೆ ಅರುಣನ ಹೆಂಡತಿ ಕ್ಷಮಾ ಒಂದು ತಟ್ಟೆ ಸಂಡಿಗೆ ತಂದು ದೇವು ಮುಂದೆ ಇಟ್ಟಳು. ಅವ ಒಂದು ಸಂಡಿಗೆಯನ್ನು ಬಾಯಿಗೆ ಹಾಕಿಕೊಂಡು, ಹಗೂರವಾಗಿ ಕಡಿದು, ಅದರೊಂದಿಗೆ ಒಂದು ಗುಟುಕು ಬೀರು ಹೀರಿ ಸಮಾಧಿ ಯಿಂದ ಹೊರ ಬರುವವರೆಗೂ ನಾವೆಲ್ಲಾ ಸಮಾಧಾನದಿಂದ ಕೂತಿದ್ದೆವು.

ದೇವು ಪ್ರಾರಂಸಿದ.

"ನೋಡ್ರೊ ಮೊದಲನೇ ಆಟದ ಹೆಸರು "**SELECT THE LEADER**" ಅಂತ. ಇದರಲ್ಲಿ ಒಂದು ತ್ರಿಕೋಣಾಕಾರದ ಆಟದ ಮೈದಾನ. ಮೂರು ಮೂಲೆ ಗಳಲ್ಲೂ ಒಂದೊಂದು ಗೋಲ್ ಪೋಸ್ಟ್. ಮೊದಲನೇ ಗೋಲ್ ಪೋಸ್ಟಿನಲ್ಲಿ ತೆಳ್ಳಗೆ ಬೆಳ್ಳಗಿರುವ ಮಹಿಳೆ ನಿಲ್ಲಬೇಕು. ಎರಡನೆಯದರಲ್ಲಿ ಧೋತಿ ಉಟ್ಟ ಮುದುಕರೊಬ್ಬ ರನ್ನು ನಿಲ್ಲಿಸಬೇಕು. ಮೂರನೇ ಗೋಲ್‌ಪೋಸ್ಟಿನಲ್ಲಿ ಢಡೂತಿಯಾದ ಒಬ್ಬ ಮಧ್ಯ ವಯಸ್ಕ ನಿಲ್ಲಬೇಕು. ಸುಮಾರು ಇನ್ನೂರು ಆಟಗಾರರು ಮೈದಾನದ ಮಧ್ಯೆ ಜಮಾಯಿಸಬೇಕು. ಈ ಗುಂಪಿನ ಕೈಯಲ್ಲಿ ಮೂರು ಚೆಂಡುಗಳು. ಆಟಗಾರರು ತಮ್ಮ ತಮ್ಮಲ್ಲೇ ಮೂರು ಗುಂಪುಗಳನ್ನು ಮಾಡಿಕೊಂಡು ಒಂದೊಂದು ಗುಂಪು ಒಂದೊಂದು ಚೆಂಡನ್ನು ತೆಗೆದುಕೊಂಡು ಬೇರೆ ಬೇರೆ ಗೋಲ್‌ಪೋಸ್ಟ್‌ಗಳತ್ತ ಓಡಬೇಕು. ಅಲ್ಲಿ ಸೇರಿದ ನಂತರ ಅಲ್ಲಿನ ವ್ಯಕ್ತಿಯನ್ನು ಕುರಿತು "ನೀವೇ ನಮ್ಮ ಲೀಡರ್" ಅಂತ ಕೂಗಿ ಚೆಂಡನ್ನು ಅವರ ಕೈಗೆ ತುರುಕಬೇಕು. ಆ ಗೋಲ್‌ಪೋಸ್ಟ್ ವ್ಯಕ್ತಿ "ನಿಮ್ಮ ಚೆಂಡು ನನಗೆ ಬೇಡ" ಅಂತ ಖಡಾಖಂಡಿತವಾಗಿ ನಿರಾಕರಿಸಬೇಕು. ಕಾಲಿಗೆ ಬಿದ್ದಾದರೂ ಚೆಂಡನ್ನು ವ್ಯಕ್ತಿಗೆ ತಲುಪಿಸುವ ಜವಾಬ್ದಾರಿ ಆಟಗಾರರದ್ದು. ಯಾವುದಾದರೊಂದು ಗುಂಪು, ಲೀಡರ್‌ಕೈಯಲ್ಲಿ ಚೆಂಡನ್ನು ತುರುಕುವುದರಲ್ಲಿ ಸಫಲ ರಾದರೆ ಅದೇ ಗೆದ್ದ ಗುಂಪು. ಆಗ ಮಿಕ್ಕೆರಡು ಗುಂಪುಗಳು ಹಾಗೂ ಗೋಲ್ ಪೋಸ್ಟ್ ವ್ಯಕ್ತಿಗಳು ಎಲ್ಲ ಓಡಿ ಬಂದು ಗೆದ್ದ ಟೀಮಿನ ನಾಯಕನನ್ನು ಕುರಿತು "ನೀವೇ ನಮ್ಮ ನಾಯಕ ಸಹಾ" ಅಂತ ಒಕ್ಕೊರಲಿನಿಂದ ಘೋಷಿಸಬೇಕು"

"ಚಿನ್ನದ ಪದಕ ಯಾರಿಗೆ ಸೇರುತ್ತೆ? ರಘುವಿನ ಪ್ರಶ್ನೆ.

"ಯಾವ ನಾಯಕ ಗೆದ್ದರೂ ಸಹ, ಚಿನ್ನದ ಪದಕ ಮಾತ್ರ ತೆಳ್ಳಗೆ ಬೆಳ್ಳಗೆ ಇರುವ ಮಹಿಳೆಯ ಕೈಗೇ ಸೇರುತ್ತೆ" ಅಂತ ಹೇಳಿ ದೇವು ಮುಂದುವರಿಸಿದ.

"ಇನ್ನೊಂದು ಆಟದ ಹೆಸರು "BUILDING THE TEMPLE"

ಇದರಲ್ಲಿ ಒಂದು ದೊಡ್ಡ ಆಟದ ಮೈದಾನ. ಒಂದು ತುದಿಯಲ್ಲಿ ಒಂದು ರಾಶಿ ಇಟ್ಟಿಗೆ. ಆಟದ ಮೈದಾನದಲ್ಲಿ ಎರಡು ಟೀಂ. ಒಂದು ಟೀಂನೋರು ಇಟ್ಟಿಗೆ ಹತ್ರ ಓಡಿ ಹೋಗಿ ಒಬ್ಬೊಬ್ಬರು ಒಂದೊಂದೇ ಇಟ್ಟಿಗೆ ತಂದು, ಮೈದಾನದ ಮಧ್ಯದಲ್ಲಿ ಒಂದು ದೇವಸ್ಥಾನ ಕಟ್ಟಲು ಪ್ರಾರಂಭಿಸಬೇಕು. ಇನ್ನೊಂದು ಟೀಂನೋರು ಅಷ್ಟೇ ಬೇಗ ದೇವಸ್ಥಾನದ ಇಟ್ಟಿಗೆಗಳನ್ನು ಒಂದೊಂದಾಗಿ ತೆಗೆದು ಮೈದಾನದ ಇನ್ನೊಂದು ತುದಿಯಲ್ಲಿ ರಾಶಿ ಹಾಕಬೇಕು.

"ಗೆಲ್ಲೋದು ಯಾರು ಮತ್ತು ಹೇಗೆ?"

"ದೇವಸ್ಥಾನ ಕಟ್ಟಿಬಿಟ್ಟರೆ, ಎರಡೂ ಟೀಂ ಸೋತ ಹಾಗೆ. ದೇವಸ್ಥಾನ ಕಟ್ಟದೇ ಇಟ್ಟಿಗೆ ರಾಶಿನ ಆ ಕೊನೆಯಿಂದ ಈ ಕೊನೆಗೆ ಐದು ವರ್ಷಗಳ ಕಾಲ ಸಾಗಿಸ್ತಾ ಇದ್ರೆ ಎರಡು ಟೀಂಗೂ ಚಿನ್ನದ ಪದಕಗಳು"

"ಮೂರ್ನೆ ಆಟ ಏನು ?"

"ಹ್ಞಾ. ಅದನ್ನೇ ಹೇಳುಕ್ಕೆ ಹೊರಟೆ. ಮೂರ್ನೆ ಆಟದಲ್ಲಿ ಬಲೇ ಮಜ ಇರುತ್ತೆ. ಇದರ ಹೆಸರು "TWENTY SEVEN PER CENT" ಅಂತ. ಇದರಲ್ಲಿ ಟೀಂ ಇವೆಂಟ್ ಇರೋದಿಲ್ಲ. ಈ ಆಟ ಪಾರಂಭಿಸಲು ಒಮ್ಮೆಲೆ ನೂರು ಆಟಗಾರರು ಬೇಕು.

ಆಟದ ಮೈದಾನದಲ್ಲಿ ಒಂದು ಗೋಡೆ. ಆ ಗೋಡೆಯ ಮೇಲೆ ನೆಲದಿಂದ ವಿವಿಧ ಅಂತರಗಳಲ್ಲಿ ಗೆರೆಗಳನ್ನು ಹಾಕಿರುತ್ತಾರೆ. ನಾಲ್ಕು ಅಡಿ, ಐದು ಅಡಿ, ಆರು ಅಡಿ ಹೀಗೆ. ಅವುಗಳ ಮಧ್ಯ ಅಂಗುಲಗಳ ಗೆರೆ ಸಹಾ.

ನೂರು ಜನ ಆಟಗಾರರೂ ಗೋಡೆಯ ಮುಂದೆ ಸಾಲಾಗಿ ನಿಲ್ಲಬೇಕು. ಎಲ್ಲಾ ನಿಂತ ಮೇಲೆ ಒಬ್ಬ ರೆಫರಿ (ಅವನು ರೆಫರಿ ಅಂತ ಗೊತ್ತಾಗೋಕೆ ಒಂದು ಫರ್ ಟೋಪಿ ಅವನ ತಲೆಯ ಮೇಲೆ) ಬಂದು ಎಲ್ಲಾ ಆಟಗಾರರ ಎತ್ತರವನ್ನ ಪರಿಶೀಸುತ್ತಾನೆ. ಅತೀ ಎತ್ತರ ಇರೊ ಆಟಗಾರನನ್ನ ಮೊದಲ ಗೋಡೆಯಿಂದ ಮುಂದಕ್ಕೆ

ಬರಲು ಹೇಳುತ್ತಾನೆ. ಅವನು ಮುಂದೆ ಬಂದ ತಕ್ಷಣ ಇಬ್ಬರು ಗೂಂಡಾಗಳು ಬಂದು ಆತನ ಬಲಗೈ ಹಿಡೀಬೇಕು. ಹೇಗೆ ಅಂತೀರಾ ? ತೋಳಿನಿಂದ ಕೈ ಕಿತ್ತು ಬರೋ ಹಾಗೆ. ಪ್ರೇಕ್ಷಕರೆಲ್ಲಾ ಆತನ ಕೂಗಾಟ ನೋಡಿ "ಹೋ" ಅಂತ ಮೆಚ್ಚುಗೆ ಸೂಚಿಸುತ್ತಾರೆ, "Bull Fighting"ನಲ್ಲಿ ಗೂಳಿಗೆ ಈಟಿ ಚುಚ್ಚಿ ರಕ್ತ ಬಂದ್ರೆ ಕೂಗುಲ್ವೇ, ಹಾಗೆ. ಆಮೇಲೆ ಇನ್ನೊಬ್ಬ ಎತ್ತರದೋನಿಗೆ ಅದೇ ಟ್ರೀಟ್‌ಮೆಂಟ್. ಪ್ರೇಕ್ಷಕರ ರಣೋತ್ಸಾಹ. ಹೀಗೆ ಎಪ್ಪತ್ತಮೂರು ಎತ್ತರದ ಆಸಾಮಿಗಳನ್ನು ಮುಗಿಸೋ ಹೊತ್ತಿಗೆ, ನೆರೆದ ಜನಸ್ತೋಮ ರಕ್ತ ಪಿಪಾಸೆಯಿಂದ ಕೂಗಿ ಕೂಗಿ ಹುಚ್ಚೆದ್ದು ಹೋಗಿರುತ್ತೆ. ಕೊನೆಗೆ ಉಳಿದ ಇಪ್ಪತ್ತೇಳು ಕುಳ್ಳರನ್ನು ಕರೆದು, ರೆಫರಿ ಅವರಿಗೆ ಚಿನ್ನದ ಪದಕಗಳನ್ನ ವಿತರಿಸುತ್ತಾನೆ"

"ಟ್ರೀನ್" ಅಂತ ಪಕ್ಕದ ರೂಮಿನಲ್ಲಿ ಟೆಲಿಫೋನ್ ಕೂಗಿತು.

ಅರುಣ ಫೋನ್‌ನಲ್ಲಿ ಮಾತನಾಡಿ, ಒಳಗೆ ಬಂದು "ಶಿವು ನಿನ್ನ ಮನೆಯಿಂದ ಬುಲಾವ್" ಅಂದ. ಭಾರತದ ನವ್ಯ ಕ್ರೀಡೆಗಳಲ್ಲಿ ಹೊನ್ನಿನ ಮಳೆಯನ್ನು ಕಾಣುವ ಕನಸನ್ನೇ ಮೆಲ್ಲುತ್ತ ಮನೆಗೆ ಹೊರಟೆ.

ನುಡಿಕಿಡಿ

ಹೊಸ ಕಳ್ಳ

ದೋಚಿ ಕೊಳುವ ಸಂಭ್ರಮದಲಿ
ಗುರುತುಗಳ ಮರೆತ
ಓಡಿ ಹೋಗುವ ಆತುರದಲ್ಲಿ
ದಾರಿಯನೂ ಮರೆತ !

— ದೊಡ್ಡ ರಂಗೇಗೌಡ



"ಸುಳ್ಳು ಹೇಳ್ಬಾರ್ದು ಅಂತೀಯಲ್ಲ– ಮತ್ತೆ ನೀನು ಒಂದು ತಿಂಗಳಿಂದ ಊಟಾನೇ ಸೇರ್ತಾ ಇಲ್ಲ ಅಂತ ಪಕ್ಕದ್ಮನೇ ಆಂಟಿ ಹತ್ರ ಹೇಳ್ತಾ ಇದ್ದೆ"

ತಬ್ಬಲಿಗಳ ಕರುಳಿನ ಕೂಗು

(ಬೇಂದ್ರೆಯವರ ಕ್ಷಮೆಯಿರಲಿ)

ಅಶೋಕ್


ಇಳಿದು ಬಾ ತಾಯಿ, ಇಳಿದು ಬಾ
ಹತ್ತು–ಜನಪಥ ದಿಂದ
ಬಂಧು ಬಾಂಧವರಿಂದ
ಮನೆಯ ಸುಖವನು ತೊರೆದು
ನುಗ್ಗಿ ಬಾ
ಇಳಿದು ಬಾ ತಾಯಿ ಇಳಿದು ಬಾ ॥೧॥

ನಾರ–ಸಿಂಹನನು ಇಳಿಸು ಬಾ
ಪಾದ ಸೇವಕರನು ಉಳಿಸು ಬಾ
ದಿಗ್ ದಿಗಂತದಲಿ ಹಣಿಸಿ ಬಾ
ಇಳಿದು ಬಾ ತಾಯಿ ಇಳಿದು ಬಾ ॥೨॥

ಶರದ ಸೊಕ್ಕನ್ನು ಮುರಿಯೆ ಬಾ
ಸಾಠೆ ಬಾಯನ್ನು ಮುಚ್ಚಿ ಬಾ
ಕೋಟರಿಯ ಆರಾಧ್ಯ ದೇವಿ ಬಾ
ಇಳಿದು ಬಾ ತಾಯಿ ಇಳಿದು ಬಾ ॥೩॥

ಮುಗ್ಧ ಹಸುಳೆಗಳನು ಮರೆತು ಬಾ
ವಕ್ಷ ಹೊಲಸಲ್ಲಿ ಹೊರಳು ಬಾ
ಸ್ವಾರ್ಥಸಾಧಕರಿಂಗೆ ಬಲಿಯೆ ಬಾ
ಇಳಿದು ಬಾ ತಾಯಿ ಇಳಿದು ಬಾ ॥೪॥

ಶೂರ ಸೀಜರನ ವಂಶಜೆಯೆ ಬಾ
ನಿನ್ನ ಮುಂದಿಟ್ಟು, ನಾವು ಹಿಂದಿದ್ದು
ದುಡಿಯುವೆವು ನಮಗಾಗಿ ಬೇಗ ಬಾ
ಇಳಿದು ಬಾ ತಾಯಿ ಇಳಿದು ಬಾ. ॥೫॥


ಚಂದ್ರ



ಕೊರವಂಜಿಯಿಂದ ....

ನನ್ನ ಕರೀ ಸೀರೆ

ಎಂ. ಆರ್. ಲ.

ಅದೊಂದು ಘೇಟ್ ಹಳ್ಳಿ. ಘನವಾದೊಂದು ಗುಡಿಯನ್ನು ಬಿಟ್ಟರೆ ಇನ್ನೇನೇನೂ ಇಲ್ಲ ಅದರಲ್ಲಿ! ಸಿನಿಮಾ ಇಲ್ಲ; ಹೋಟಲು ಇಲ್ಲ; ಸರಿಯಾದ ಒಂದು ಟಾಂಗಾ ಕೂಡಾ ಇಲ್ಲ. ಆದರೆ ಗುಡಿಯೊಂದಿತ್ತಲ್ಲ! ಪರಿಚಿತ ಮಿತ್ರರ ಮನೆಯಲ್ಲಿ ಮೊಕ್ಕಾಂ ಮಾಡಿ ದೇವಸ್ಥಾನ ನೋಡಿಕೊಂಡು ಮರು ದಿನ ಹೊರಡುವುದು ಅಂದುಕೊಂಡು ಅವರ ಮನೆ ಪತ್ತೆ ಮಾಡುತ್ತಾ ಹೊರಟೆವು. ವು ಅಂದರೆ, 'ಅವರೂ , ನಾನೂ.

ಮಿತ್ರರು ಅಂದರೆ ಹೀಗೆ! ಆತ ತನ್ನ ತಂದೆಯ ಕಣ್ಣಿನ ಚಿಕಿತ್ಸೆಗಾಗಿ ಧಾರವಾಡದ ಕಡೆಯಿಂದ ವಿಕ್ಟೋರಿಯಾ ಆಸ್ಪತ್ರೆ ಇದ್ದ ಬಂಗಳೂರಿಗೆ ಬಂದಾಗ ನಮ್ಮ ಪಕ್ಕದ ಮನೆ ಔಟ್‌ಹೌಸಿನಲ್ಲಿ ವಾಸವಾಗಿದ್ದರು. ಆಗ ಆತನ ಪರಿಚಯ 'ಅವರಿಗೆ' ಲಭಿಸಿತು. "ನೋಡುತ್ತಿರು! ಎಷ್ಟು ಉಪಚಾರ ಮಾಡ್ತಾರೆ ಅಂತಿ! ಅವರ ಮನೆಯಲ್ಲಿ ಕೈ ತೊಳೆಯುವುದು ಚಹಾದಲ್ಲೇ ಅಂತೆ! ಚಪಾತಿ ಪೋಳಿ ದಶಮಿ ನೂರು ಗಟ್ಟಲೆ ಮಾಡುತ್ತಾರೆ! ಶ್ರೀಖಂಡ, ಬಿಸ್ಕೀಟಂತೂ ವಾರಕ್ಕೊಮ್ಮೆ ಇದ್ದೇ ತೀರಬೇಕಂತೆ" ಅಂದರು. "ನೋಡುತ್ತಿರು! ಒಂದೇ ದಿನಕ್ಕೆ ಅವರು ನಮ್ಮನ್ನು ಬಿಟ್ಟು ಕೊಡೋದೇ ಇಲ್ಲ" ಅಂದರು.

ಹಸಿದಿದ್ದ ನಾನು ಸವಿಗನಸು ಕಾಣುತ್ತಿದ್ದೆ ಬೇಗ ಬೇಗ ನಡೆದೆ. ಮನೆ ಸಿಕ್ಕಿತು! ಆವರಣದ ಹತ್ತಿರ ಆಳೊಬ್ಬ ನಿಂತಿದ್ದ. "ನಿಮ್ಮ ಬುದ್ಧಿಯವರು ಮನೆಯಲ್ಲಿದಾರೇನೋ, ಮತ್ತೆ" ಅಂದಾಗ, ಕಕ್ಕಾಬಿಕ್ಕಾದವನಂತೆ, "ಸಂತಿ ಬಾಜಾರಕ್ಕೆ ಇದೇ ಈಗ ಹೊಂಟಾರೆ ಕಾಕಾ ಫಣ್ಯೋರು! ಹೊಂಟು ಎರಡು ಮಿನೀಟು ತೀರಿಲ್ಲ ಸುದಾ" ಅಂತ ಗಡಬಡಿಸಿದ. ಆಗ 'ಅವರು', "ಹಾಗಿದ್ದರೆ, ನಾನು ಸಂತೆ ಕಡೆ ಹೋಗಿ ಆತನ್ನ ಹುಡುಕಿಕೊಂಡು ಬರುತ್ತೇನೆ! ನೀನು ಒಳಗೆ ಹೋಗು" ಅಂದರು. "ಒಳಗೆ ಹೋಗು! ಅಂದರೆ ? ನನಗೆ ಯಾರ ಗುರುತೂ ಇಲ್ಲ! ಹೋಗೋದು ಹ್ಯಾಗೆ?" ಅಂದೆ. "ಹೋಗೇ ಸುಮ್ಮಗೆ! ಹೆಂಗಸರ ಗುರ್ತು ಮಾಡಿಕೊ!" ಅಂತ ನಡೆದೇಬಿಟ್ಟರು, ಆಳನ್ನೂ ಕರೆದುಕೊಂಡು.

ಹೊಸ್ತಿಲ ಬಳಿ ಸೇರುವ ಹೊತ್ತಿಗೆ ನನಗೆ ಸಾಕುಬೇಕಾಯಿತು. ಸುಮಾರು ಹತ್ತು ವರ್ಷದ ಹುಡುಗ ಹಾಗೆ ಹೀಗೆ ಅಡ್ಡಾಡಿ ಒಳಕ್ಕೆ ಹೋದ. ವಿಚಾರ ತಿಳಿಸಾನು ಅಂತ ಇದ್ದರೆ ಮತ್ತೆ ಹೊರಬಂದು ಮತ್ತೆ ಒಳ ಹೊಕ್ಕ. ಆ ಹೈದನ ಅಂತರ್ಧಾನ ಪ್ರತ್ಯಕ್ಷ ನೋಡಿ ಬೇಸರಕ್ಕಿಟ್ಟು, ನಾನು, ಅವನು ಬಂದ ಸಮಯ ನೋಡಿ, "ಲೋ! ಒಳಗೆ ನಿಮ್ಮ ತಾಯಿ ಇದಾರೆಯೋ ?" ಅಂದೆ. ಹುಡುಗ ಪೀಪಿ ಊದಿದ. ಮೂರು ನಾಲ್ಕು ಸಿಳ್ಳೆ ಹಾಕಿ, "ಇಲ್ಲ" ಅಂದ.

ಅಕ್ಕ ?

ಇಲ್ಲ.

ಮತ್ತೆ ಯಾರಿದಾರೆ ?

ಅವ್ವ !

ಅವರನ್ನ ಕೊಂಚ ಬರಹೇಳಪ್ಪ !

ಉತ್ತರವಾಗಿ ಅವನು ಪೀಪಿ ಊದಿದ.

ಆಮೇಲೆ ಊದುವಿಯಂತೆ ! ಮೊದಲು ಆಕೆಯನ್ನು ಕೂಗು ! ಆದಕ್ಕವನು ಜೋರಿಲ, "ಅವ್ವಾ" "ಅವ್ವಾ" ಅಂತ ಒದರಿದ.

ಸುಮಾರು ರಿಟೈರಿಂಗ್ ವಯಸ್ಸಿನ ಮುದಿ ಹೆಂಗಸೊಬ್ಬರು ಬಾಗಿಲಿಗೆ ಬಂದರು. ಅಬ್ಬಾ ! ಎಷ್ಟು ಎತ್ತರ ! ಏನು ಲಠ್ಠ ಮೈ ! ಗಾಬರಿಯಿಂದ ಹುಲ್ಲು ಕಡ್ಡಿ ಯಂತಾದೆ ನಾನು !

"ಏನವ್ವಾ ! ತಂಗೀ !" ಎಂಬ ಅರಚಿಗೆ ಉತ್ತರವಾಗಿ ಸ್ಥಿತಿಗತಿಗಳನ್ನು ವಿವರಿಸಿದೆ, ಕೆಳದನಿಯಲ್ಲಿ. ಆದಕ್ಕೆ ಆ ಹುಡುಗ, "ಮುಳುಮುಳು ಅಂತ ಅನಬ್ಯಾಡ್ರಿ ! ಅವ್ವನಿಗೆ ಕಿವಿ ನೆಟ್ಟಗೆ ಕೇಳಿಸೋದಿಲ್ಲ" ಅಂತ ಎಚ್ಚರಿಸಿದ. ಆಮೇಲೆ ಆದನ್ನೆಲ್ಲಾ ಮೇಲು ದನಿಯಲ್ಲೇ ಶ್ರುತಪಡಿಸಿದೆ.

ಎಷ್ಟೋ ಹೊತ್ತಾದಮೇಲೆ, "ಒಳಕ್ಕೆ ಬರ್ರಿ ! ಜಾಜಯುದ ಮ್ಯಾಲೆ ಕೂಡ್ರಿ" ಎಂಬ ಅಪ್ಪಣೆ ಬಂತು.

ಅಲ್ಲಿಂದಾಚೆಗೆ ಒಬ್ಬರೂ ನನ್ನ ಪರಿವೆಗೆ ಬರಲೇ ಇಲ್ಲ. ಆಕೆಯೂ ಮತ್ತೊಬ್ಬಾಕೆಯೂ ಹುರಿಗಡಲೆ ಆರಿಸಿದರು. ಅವಲಕ್ಕಿ ಕೇರಿದರು. ರಾತ್ರಿಗೆ ಒಗ್ಗರಣೆ ಅವಲಕ್ಕಿ ಮಾಡುವರೋ ಏನೋ ಅಂತ ಎಣಿಕೆ ಹಾಕಿದೆ. ಬಾಯಲ್ಲಿ ನೀರೂರಿತು. ಅವರ

ಅನಾದರಣೆಯಿಂದ ನಾನು ಬಹಳ ನೊಂದೆ. ಕಡೆಗೆ, ಹಾಳಾಗಿ ಹೋಗಲಿ, 'ಸೀಸೀ' ಮುಖ ನೋಡುವ ಅಂತ ಕೊಂಚ ಹತ್ತಿರಕ್ಕೆ ಸರಿದೆ.

"ಈ ಹುಡುಗ ನಿಮ್ಮ ಮೊಮ್ಮಗ ತಾನೆ ?"

"ಹೌಂದು ! ಯಾವೂರಮ್ಮಾ ನಿಮ್ಮದು ?"

"ಮೈಸೂರು ! ಅ... ಅಜ್ಜೀ... ಅಲ್ಲ... ಅವ್ವಾ"

"ಅವ್ವ ಅಪ್ಪ ಹಾರೇ ?"

"(ಅವ್ವ ಅಪ್ಪ ಹಾರೇ ?...!!...ಏನು ವಿಚಿತ್ರ ಇದು ?)...ಹೂಂ. ಇದಾರೆ."

"ಗುಡಿ ನೋಡ್ಲಿಕೇಂತ ಬಂದಿರೇನು ಮತ್ತ?"

"ಹೌದು !...ಈ ಮನೆ ನಿಮ್ಮದೇ ಏನು?"

"ಅಯ್ಯ ! ಮನಿಗಿನಿ ನಮ್ಮದು ಹ್ಯಾಂಗಾದೀತು ? ಖೋಡಿ ನೂಸೇರು ಇದ್ದವ್ಯಾಲ? ನನ್ನದೂಂತ ಏನಾರಾ ಉಳಿವದೇನು? ಹೌದಲ್ಲೇ ಕಾಸಕ್ಕ?"

"ಆ ಹುಡುಗ ನಿಮ್ಮ ಮೊಮ್ಮಗ ತಾನೆ?"

"ಮೊಮ್ಮಗ ಅಂತೆ ಎಷ್ಟು ನಲ ಹೇಳಲೇ ನಮ್ಮವ್ವ ! ನನ್ನ ನೂಸಿ ಮಗ, ಅವ."

"ಅವನನ್ನ ನೋಡಿ ನನ್ನ ತಮ್ಮನ ಜ್ಞಾಪಕ ಬಂತು."

"ಹಿಂಗೇನು ? ಎಷ್ಟು ಮಂದಿ ತಮ್ಮಂದಿರು ಹಾರೆ?"

"ಇಬ್ಬರು ! ನೋಡಿ, ಭಾಳ ಚಾಲೂಕು ಹುಡುಗ, ನನ್ನ ತಮ್ಮ. ಎಲ್: ಎನ್. ಪರೀಕ್ಷೆಗೆ ಈ ವರ್ಷ ಕೂಡ್ತಾನೆ. ನಾನು ಬಿ. ಎ.ಗೆ ಓದುತ್ತಿದ್ದಾಗ ಎರಡನೇ ತಮ್ಮ ಹುಟ್ಟಿದ....ಈಗ ಅವನಿಗೆ ಮೂರು ವರ್ಷ."

"ಹಂಗಾರೆ ನೀ ಬಿ. ಎ. ಪಾಸಾಗೀಯೇನು?" ಅಂತ ಮುದುಕಿ ಕೇಳಿದಳು. ಆದರೆ, ಎಂತಹ ಸ್ವರದಲ್ಲಿ ಗೊತ್ತೆ ? "ನಿನ್ನ ಕೈ ನೆಗಣೆ ಆಗಿದೆಯೇನು ?" ಎಂಬ ಸ್ವರದಲ್ಲಿ! ನಾನು ಗ್ರಾಜುಯೇಟ್ ಅಂದರೆ ಮುದುಕಿ ಮಹಭರ್ಜನೆ ಮಾಡಬಹುದು ಅಂತ ಮಾಡಿದ್ದು ತದ್ವಿಪರೀತವಾಯಿತು !

"ಮಡಮ್ಮಾಗೀಯೇನು ನೀ?"

"ಇಲ್ಲ ಅಜ್....ಅವ್ವಾ."

"ಮತ್ತ ಸುಮ್ಮನೆ ಕಲಿತೇನು ಮಾಡಿದೀ ! ಬಿಡು ಹಂಗಾರ"

ನಾನು ಜಂಬ ಕೊಚ್ಚಿದ್ದು ಪೂರಕವಾಗುವುದರ ಬದಲು ಮಾರಕವಾಯಿತು. ಮುದುಕಿಯರು ಮತ್ತೆ ನನ್ನನ್ನ ಚ ಚು ಅಂತ ಮಾತನಾಡಿಸಲೇ ಇಲ್ಲ.... ಅವರು ಆಡುತ್ತಿದ್ದ ಮಾತಿನಿಂದ 'ಅವರ' ಗುರುತಿನ ಮಿತ್ರ, ಮನೆ ಯಜಮಾನ ಮತ್ತು ಯಜಮಾನಿ ಇಬ್ಬರೂ ಪರಸ್ಥಳ 'ಹೋಗ್ಯಾರ' ಎಂದೂ, "ಸಂತಿ"ಗೆ ಹೋಗಿದ್ದಾತ ಆಕೆಯ ತಮ್ಮ ವಿನಾಯಕ ಕಾಕನೆಂದೂ ತಿಳಿಯಿತು. ಅಷ್ಟರೊಳಗೆ ಅವರೇ ಬಂದರು. ನಾವು ಪರಿಸೆ ನೋಡುವುದಕ್ಕೆ ಅವರ ಹಿಂದೆಯೇ ಆಗಲೆ ಹೊರಟೆವು. ಸುತ್ತಿಕೊಂಡು ಮನೆ ಸೇರುವ ಹೊತ್ತಿಗೆ ಹಸಿದ ತೋಳಗಳಾಗಿದ್ದುವು.

ಕಾಕಾ ಅವರು "ಊಟಕ್ಕೇಳ್ರಿ" ಅನ್ನುವುದೇ ತಡ ಊಟದ ಮನೆ ಕಡೆ ಧಾವಿಸಿದುವು. ಹೊಸ್ತಿಲು ಮೆಟ್ಟಿದೆ ; ಮುದುಕಿ ಅಡ್ಡ ಬಂದಳು ! "ಕುಂಜೀ ಧೋತ್ರ ಕೊಡಲ್ಯಾ?" ಅಂತ ಕೇಳಿದಳು. ನನಗೆ ಗಾಬರಿ ಆಯಿತು. "ಯಾಕೆ?" ಅಂದೆ. ಉಟ್ಕೊಂಡು ಊಟ ಮಾಡಲಿಕ್ಕೆ"

ದೇವರೇ ! ಧೋತ್ರ ಪಂಚೆ ಉಟ್ಕೊಂಡು ಊಟ ! ಅದೂ ಇನ್ನೊಬ್ಬರದು!.... ಇಂಥಾ ಪೇಚಿನಲ್ಲಿ ನಾನೆಂದೂ ಸಿಕ್ಕಿಬಿದ್ದಿರಲಿಲ್ಲ! ಧೈರ್ಯ ತಳೆದು ಹೇಳಿದೆ, "ಇಲ್ಲವ್ವಾ ! ನಮ್ಮಲ್ಲಿ ಈ ತರ ಪದ್ಧತಿ ಇಲ್ಲ. ಶಿವ, ಶಿವ. ನಾನು ಈ ತರ ಕೇಳೇ ಇಲ್ಲ. ಬೇಡ್ರಿ ನಿಮ್ಮ ಧೋತ್ರ" ಅಂದೆ.

"ಸರಿ, ಹಂಗಾರ! ಇಲ್ಲೇ ಕೂಡ್ರು ಊಟಕ್ಕೆ. ಕಟ್ಟೀ ಮ್ಯಾಲೆ ತಂಬಿಗಿ ಇಟ್ಟೀನಿ. ಕಾಲ್ ತೊಳಕ್ಕೊಂಡ್ಬಾ....ಅಂದರ ಬಚ್ಚಲ ಮನೆಗೆ ಹೋಗು ಬ್ಯಾಡ ತಂಗೀ ಮತ್ತ."

ಊಟದ ಮನೆ ಹೊರಗೆ.... ನನ್ನ ! ಅಲ್ಲೇ ಕುಕ್ಕರಿಸಿದೆ. ಅಡಿಗೆ ಬಡಿಸಿದರು. ಅನ್ನ, ಅಮಟೀ, ಬೆಳಗಿನ ಭಕ್ರಿ, ಭಕ್ಕರಿ ಖಂಡಾತುಂಡಾಗಿ ಹಲ್ಲನ್ನೆಲಾ ತುಂಡಿಸುವಂತಿತ್ತು. ಆ ಅವಲಕ್ಕಿ ಕೊಬ್ಬರಿ ಎಲ್ಲವೂ ಏನಾದುವೋ ಎಂದು ಅಚ್ಚರಿಪಟ್ಟಿತು, ನಾಲಿಗೆ....ಊಟ ಮುಗಿಯಿತು.... ಗಂಡಸರ ತಾಟು ಬಟ್ಟಲನ್ನು ಅಡಿಗೆಯವ ಶುದ್ಧಿ ಮಾಡಲು ತೆಗಿದುಕೊಂಡು ಹೋದ. "ಎಲೆ ಬಿಸಾಡಿ, ಹಿಂದಾಗಡೆ ಗೋಮಯ ಹಚ್ಚು ! ಪರಂತು ಬಚ್ಚಲು ಮನ್ಯಾಗೆ ಹೋಗಬೇಡ. ಇಲ್ಲೇ ನೀರಿಟ್ಟೀನಿ. ಕೈ ತೊಳೆದು ಹಿಂದಾಗಡೆ ತಂಬಿಗಿ ಬೋರಲಿಡು."

ನನಗೆ ಸಿಟ್ಟು ಉರಿದು ಬಂತು. ಸ್ವಾಭಿಮಾನ ಹೇಳಿತು: "ಛೆ! ಈಗಲೇ 'ಅವರನ್ನು' ಹೊರಡಿಸು. ಗುಡಿ ಎಲ್ಲಾದರೂ ಹೋಗಲಿ. ಮೊದಲು ರೈಲು ಹತ್ತಿ ಹೊಗದಿ" ಅಂತ. ತಾಳ್ಮೆ ಹೇಳಿತು: "ಬೇಡ! ಇದೂ ಒಂದು ಮಜ಼ಾ! ಇಷ್ಟು ಖರ್ಚು ಮಾಡಿಕೊಂಡು ಬಂದ ಮೇಲೆ..."

ಅರ್ಧ ತಾಸಿನ ನಂತರ ಅವರು ಹೇಳಿದಂತೆ ನಡುಮನೆಯಲ್ಲಿ ಹಾಸಿಗೆ ಉರುಳಿಸಿ ಮಲಗಿದೆವು. ಪಕ್ಕದ ಕೋಣೆಯ ಅರೆ ಮುಚ್ಚಿದ ಬಾಗಿಲಿಂದ ಕಾಕಾ ಅವರ ಗೊರಕಾ ಧ್ವನಿ ತುಯ್ಯುತ್ತ ತುಯ್ಯುತ್ತಾ ಬರುತ್ತಿತ್ತು. ಆ ಜೋಗುಳಕ್ಕೆ ಮೈ ಮರೆತು, ನಿದ್ದೆ ಬಂತು.

* * *

ಬೆಳಗಾಯ್ತು. ಆಗ ನನಗೆ ಒಂದು ಯೋಚನೆ ಹೊಳೆಯಿತು. ಬಹುಶಃ ನಾನು ಕಚ್ಚೆ ಹಾಕದಿರುವುದರಿಂದ ಯಾವುದೋ ಜಾತಿಯವಳು ಎಂದು ಮುದುಕಿಯರು ತಿಳಿದರೋ ಏನೋ? ಅಂತ ಯೋಚಿಸಿ, ಕಚ್ಚೆ ಹಾಕಿ ಸೀರೆ ಉಟ್ಟೆ. ಹಣೆ ಮಧ್ಯಕ್ಕೆ ಕುಂಕುಮ ಇಟ್ಟೆ. ಮುದುಕಿಯವರಲ್ಲಿ ಮಾತು ಬೆಳಸಿ ನಮ್ಮ ತಂದೇದು ದೊಡ್ಡ ಆಚಾರ್ಯ ಮನೆತನ, ಅವರು ಮತ ಗ್ರಂಥ ಬರೆದಿದ್ದಾರೆ, ನನ್ನ ಮಾವನವರ ತಮ್ಮ ಧಾರವಾಡದ ವಕೀಲರು ಎದೆಲ್ಲಾ ತಿಳಿಸಿದೆ. ಕಡೆಗೆ, "ಹಾಂಗೇನು? ಸುಶೀಲಾ ಬಾಯೇರ ಸೊಸಿ ಏನು?" ಎಂಬ ರಾಗ ಬಂತು. "ಆಕಿ ಹಂತಿದ್ರು ನಮ್ಮ ಭಾವೂಜಿ ಅವರ ಸೊಸಿ ಮೈಸೂರಲ್ಲಿ ಹಾರೆ! ಭಾಳೇ ಶಾಣೇ ಆಕಿ ಅಂತ! ನೆಟ್ಟಗಾತು. ನೀ ಧಾರವಾಡಕ್ಕೆ ಹೋದರ ಆಕಿಗೆ ನಾನು ನೆನಸಿದೇಂತ ಹೇಳವ್ವ. ಮತ್ತ ಮರೀಬೇಡ. ಹಾಂ!"

ಅಷ್ಟೆ! ಸ್ನಾನದಮನೆಗೆ ಮಾತ್ರ ಅಪ್ಪಣೆ ಚೀಟಿ ದೊರಕಲಿಲ್ಲ. ಗುಡಿಗೆ ಹೋಗುತ್ತ 'ಅವರನ್ನು' ಕೇಳಿದೆ: "ನಾನು ಕೀಳು ಜಾತಿಯವಳು ಅಂತ ಇದಾ. ರೇನು?" ಅಂದೆ. "ಆ ಮುದುಕೀನ ಕೇಳು ಬೇಕಾದರೆ" ಅಂದರು "ನಿಮಗೆ ಹಾಸ್ಯ, ನನಗೆ ಸಂಕಟ. ನಾನೇನು ಅಷ್ಟು ಅಸಹ್ಯವಾಗಿದೇನೆಯೇ? ಉಟ್ಟಿರುವ ಬಟ್ಟೆ ಕೊಳೆಯೇ? ನೊಗಸಾದ ಕರೀ ಧರ್ಮವರದ ಸೀರೆ. ಇಟ್ಟಿಗೆ ಗೂಡಂಚಿನ ಸೀರೆ! ಫಳಫಳ ಮಿರುಗುತ್ತಿದೆ!... ಕಚ್ಚೇನೂ ಹಾಕಿದೀನಿ.! ಪರಿಚಿತ ಸೊಸೆ! ಇಷ್ಟಾಗಿ ಮುದುಕಿ ಸ್ನಾನದಮನೆಗೆ—ಸ್ನಾನದಮನೆಗೆ—ನನ್ನನ್ನ ಬಿಡದೆಹೋದಳು. ನೀವೋ ತಣ್ಣಗಿದೀರಿ! ಊಟದ ಮನೆಯೊಳಕ್ಕೂ ಬಿಡಲಿಲ್ಲವಲ್ಲ....ಆ...." ಅಂದೆ ಅದಕ್ಕವರು, "ಈ ಸೀಮೆ ಗಂಡು ರಾಜ್ಯ; ಗಂಡಸರಿಗೆ ಇಲ್ಲಿ ಮನ್ನಣೆ ಹೆಚ್ಚು

ಅಂತಲೇ ನಾನು ಇಲ್ಲಿ ೧೫ ದಿನ ಇರತಕ್ಕವ" ಅಂದರು. ನನಗೆ ರೇಗಿತು. "ಸುಖ ವಾಗಿರಿ! ನಾನಂತೂ ಇದೇ ಗುಡಿಯ ಕೊಳದಲ್ಲಿ ಬಿದ್ದು ಸಾಯ್ತೀನಿ" ಅಂದೆ.

ಕೊಳದಲ್ಲೂ ಬೀಳಲಿಲ್ಲ. ಸಾಯಲೂ ಇಲ್ಲ. ಮತ್ತೆ ಹೊರಗೆ ಕೂತು ಊಟ ಮಾಡಿ ರೈಲಿಗೆ ಹೊರಟೆವು. ಈ ಕಡೆಯ ಪದ್ಧತಿಯಂತೆ ಮುದುಕಿಗೆ ನಮಸ್ಕಾರ ಮಾಡಿದೆ. ಮನಃಪೂರ್ವಕವಾಗಿ ಅಲ್ಲ, ತೋರಿಸೋಣ ನಮ್ಮ ಉದಾರ ವರ್ತನೆ, ಅವರ ಜಿಗಟುತನ, ಅಂತ! "ಗಂಡು ಕೂಸಿನ ತಾಯಿ ಆಗವ್ವ" ಅಂತ ಹರಸಿದಳು.

* * *

ಊರು ಸೇರಿದ ಮೇಲೆ ಮಾತಿಗೆ ಮಾತು ಬಂದಾಗ ಧಾರವಾಡದ ಗೆಳತಿ ಯೊಂದಿಗೆ ಎಲ್ಲಾನೂ ತಿಳಿಸಿದೆ. ಮುದುಕಿಯನ್ನು ಅಸಡ್ಡಾಳ ಮುದುಕಿ ಅಂತ ಅಲ್ಲ ಗಳೆದೆ. "ನೋಡೇ! ಮಾಲತಿ! ಇದೇ ಈ ಸೀರೆ ಉಟ್ಟಿದ್ದೆ. ನಾನೇನು ಅಷ್ಟು ಹೊಲಸು ಕಾಣಿಸ್ತೇನೆಯೇ? ಊಟದ ಮನೆಗೆ ಬಿಡಬಾರದಾಗಿತ್ತೆ?" ಅಂದೆ.

ಅದಕ್ಕವಳು, "ಏನು? ಇದೇ ಸೀರೆ ಉಟ್ಟಿದ್ದೆಯಾ? ನಿಜವಾಗಿಯೂ?" ಅಂದಳು.

"ಹೂ."

"ಹಾಗಿದ್ದರೆ ನಾನೊಂದು ಮಾತು ಹೇಳುತ್ತೇನೆ, ಕೇಳು. ಅವರು ಒರಟು ಮಂದಿ ಇರಬಹುದು. ಆದರೆ ನೀನು ಅನ್ನುವಷ್ಟು ಅಸಡ್ಡಾಳ ಮಂದಿ ಅಲ್ಲ. ಆ ದಿನ ನಿನ್ನನ್ನು ಹೊರಗಟ್ಟಲು ಕಾರಣ ಇತ್ತು."

"ಏನದು?"

"ನಿನ್ನ ಕರೀ ಸೀರೆಯೇ ನಿಜವಾದ ಅಪರಾಧಿ."

"ಕರೀ ಸೀರೆ! ಈ ಜರೀ ಸೀರೆ!"

"ಹೌದು! ಆ ಕಡೆ ಕರೀ ಸೀರೆ ಉಟ್ಟರೆ, ಮೈಲಿಗೆ! ಮಹಾ ಮಹಾ ಮೈಲಿಗೆ! ಆದಕ್ಕೇ ಆ ಮುದುಕಿ ನಿನಗೆ ಧೋತ್ರ ಉಟ್ಟು ಉಣ್ಣಲಿಕ್ಕೆ ಹೇಳಿದ್ದು!..."

"ಆದಕ್ಕೇ.....!!"

* * *

ನೀತಿ : ಕರೀ ಜರೀ ಸೀರೆಯಿಂದ ಅಂದವೊಂದೇ ಅಲ್ಲ, ಅನರ್ಥವಾಗುವುದೂ ಉಂಟು.

ಮಿಸ್ ಪಿಂಟೋ (ಒಂದು ನವಪದ್ಯ)

–ಎಸ್. ಎನ್. ಶಿವಸ್ವಾಮಿ

ಅಲ್ರೀ, ಪದ್ಮಮ್ಮ, ಯಾಕ್ರೀ ನಿಮ್ಮೋರು
ಆ ಹುಡ್ಗಿ ಹಿಂದೆ ಹಾಗಲೀತಾರೆ ?
ಯಾರಂತೆ ಅವಳು, ಆ ಮಿಸ್ ಪಿಂಟೋ ? 1

ಆಫೀಸು ಬಿಟ್ಮೇಲೆ ನ್ಯಾರವಾಗಿ ಮನೇಗೆ ಬರೋಕ್ಹೇಳಿ.
ಈಗಂತೂ ಬರೋ ಹೊತ್ತಿಗೆ ಏಳೋ, ಎಂಟೋ !
ಯಾರಂತೆ ಅವಳು. ಆ ಮಿಸ್ ಪಿಂಟೋ ? 2

ಅವಳೇನು ಮಾಟ ಮಾಯ ಮಾಡ್ಬಿದ್ದಾಳೋ,
ಒಳ್ಳೆ ಗ್ರಹಚಾರ. ಇದ್ಯಾವ ಸೀಮೆ ನಂಟೋ !
ಯಾರಂತೆ ಅವಳು, ಆ ಮಿಸ್ ಪಿಂಟೋ ? 3

ದಿನಾ ಅವಳ ಜತೆ ಅಲೆದಾಟವಂತೆ, ಊರೆಲ್ಲ ಗುಸಗುಸ.
ಇರತ್ತಲ್ಲ ಷಾಪಿಂಗು, ಸೆಂಟೋ, ಪ್ರೆಸೆಂಟೋ,
ಯಾರಂತೆ ಅವಳು, ಆ ಮಿಸ್ ಪಿಂಟೋ ? 4

ವಿಚಾರ್ಸಿ ನೋಡಿ, ಬರೀ ಆಫೀಸ್ ವ್ಯವಹಾರವೋ,
ಬೇರೇನಾದ್ರೂ ಸಂಬಂಧ ಉಂಟೋ ?
ಯಾರಂತೆ ಅವಳು ಆ ಮಿಸ್ ಪಿಂಟೋ ? 5

ಯಾರೋ ಕೇಳಿದ್ದಕ್ಕೆ ನನ್ ನೀಸೂ ಅಂದ್ರಂತೆ !
ಅಧ್ವಾನ ! ಅದ್ಯಾವ ಜನ್ಮದ ಅಂಟೋ ?
ಯಾರಂತೆ ಅವಳು, ಆ ಮಿಸ್ ಪಿಂಟೊ ? 6

ಏನಂತೆ ನಿಮ್ಮಲ್ಲಿ ಕಮ್ಮಿ ? ನೀವೇನು
ಕುರುಡೋ, ಕಿವುಡೋ, ಅಥವಾ
ನಿಮಗೇನು ಒಂದು ಕಾಲು ಕುಂಟೋ ?
ಯಾರಂತೆ ಅವಳು, ಆ ಮಿಸ್ ಪಿಂಟೋ ? 7

ಒಂದ್ಸಲ ಅವಳ್ನೇ ಬರ ಹೇಳಿ,
ತಾಳಿ ತೋರ್ಸಿ ಕೇಳಿ,
ಇದೇನು ಮಿಷ್ಗಿರೀನೋ, ಬ್ರಹ್ಮ ಹಾಕಿದ ಗಂಟೋ ?
ಯಾರಂತೆ ಅವಳು, ಆ ಮಿಸ್ ಪಿಂಟೋ ? 8

ಹೊಟ್ಟೆ ಪಾಡು

ಶಾಂತಾ ರಘು

"ಹೊಟ್ಟೆಗಿಲ್ದೆ ಸತ್ರೂ ಸರಿ, ಮೊಟ್ಟೆಗಿಟ್ಟೆ ತಿನ್ನೊಲ್ಲಾಂತ ಕೆಟ್ಟ ಹಟ ತೊಟ್ಟಿದ್ದೀಯಲ್ಲೇ. ನಿನ್ನಂಥಾ ಪುಳಿಚಾರುಗಳು ಅಮೆರಿಕಾಗೆ ಬರೋಕೆ ಲಾಯಖ್ಖಿಲ್ಲಾ ಕಣೆ" ಅಂತ ಚಿಕಾಗೋದ ಚೈನೀಸ್ ರೆಸ್ಟೊರಾಂಟ್‌ನಲ್ಲಿ ಕೂತು ನನ್ನ ಕಸಿನ್ ಲೇವಡಿ ಮಾಡಿದಳು.

"ಆಗ಼್ೇ ಕೂಕ್ಕೊಂಡೆ. ಅಮೆರಿಕಾಗೆ ಹೊರಡೋಕೆ 2, 3 ತಿಂಗಳು ಮುಂಚೆಯಿಂದ ಮೊಟ್ಟೆನಾದ್ರೂ ತಿಂದು ಅಭ್ಯಾಸ ಮಾಡ್ಕೊಳ್ಳೇಂತ. ಕೇಳಿದ್ಯಾ? ಈಗ ನೋಡು, ಒಳ್ಳೆ ಗೂಸ್ಲೂ ತರಾ ಆಡ್ತಾ ಇದೀಯಾ. ಏನೂ ಸೇರೊಲ್ಲ ಅಂದ್ರೆ ಹ್ಯಾಗೆ?" ಯಜಮಾನರು ಗೊಣಗಿದರು.

ಏನು ಮಾಡೋದು? 2, 3 ತಿಂಗಳಿಂದ Salad ಅನ್ನೋ ಹೆಸರಲ್ಲಿ ಸೊಪ್ಪು, ಸದೆ, ಎಲೆಗಳನ್ನು ದನದ ಹಾಗೆ ಮೇದು, ಮೇದು ಮುಖದ ಮೇಲೆ ಒಂಥರಾ ಗೂಸ್ಲೂ ಖಳೆ ಬಂದಿರಬಹುದು! ನನ್ನಂತಹ ಪ್ಯೂರ್ ವೆಜಿಟೇರಿಯನ್ಸ್ ಪಡುವಣ ಯಾತ್ರೆ ಹೊರಟರೆ, ಬಾಯಿ, ಹೊಟ್ಟೆ ಎಲ್ಲವನ್ನೂ ಗಟ್ಟಿಯಾಗಿ ಕಟ್ಟಬೇಕು! ಇಲ್ದಿದ್ರೆ ಕೆಟ್ಟೆವು!

ಆಶ್ಚರ್ಯ! ಇಲ್ಲಿರೋ ತನಕ ಹೊಟ್ಟೆಯ ನೆನಪು ಯಾರಿಗಿತ್ತು? ಹೊತ್ತು ಹೊತ್ತಿಗೆ ತುತ್ತು ಬೀಳ್ತಾ ಇತ್ತು.... ತಪ್ಪಗಿತ್ತೇನೊ? ಅಮೆರಿಕದಲ್ಲಿ ಬಂತು ಆಪತ್ತು! ಊಟಕ್ಕೇ ಕುತ್ತು!

Menu cardನಲ್ಲಿ ನನಗೆ ಬೇಕಾದ್ದು ಯಾವುದೂ ಇಲ್ಲ. ಅಲ್ಲಿ ಸಸ್ಯಾಹಾರಿಗಳಿಗೆ ಸುಲಭವಾಗಿ ಸಿಗೋದು ಸಸ್ಯಗಳೇ! Spinach, ಕೋಸು, ನಮ್ಮೂರಿನ ಕೊತ್ತಂಬರಿ ಸೊಪ್ಪಿನ ಅಣ್ಣ Brochelli, ಇವೆಲ್ಲರ ತಲೆಯ ಮೇಲೆ ಹಳದಿ ಲೋಳೆಯಂಥ ಕ್ರೀಂ ಸುರುವಿ, ಆದರ ಮೇಲೆ ಉಪ್ಪು, ಪೆಪ್ಪರ್ ಹರಡಿ, ಬಲು

ಸಂಭ್ರಮದಿಂದ ತಂದಿತ್ತಾ ಇದ್ರು. ತಿರುಗೋಕೆ ಪ್ರಾಣ ಬೇಕೂಂದ್ರೆ ಅದನ್ನ ತಿನ್ನಲೇಬೇಕು ! 3 ತಿಂಗಳು ಹೀಗ ಎಲೆಗಳನ್ನು ಅಗಿದು, ಅಗಿದು, ಕೊನೆಗೆ ಎಲ್ಲ ದನಗಳ ತರಹ ಮೆಲುಕು ಹಾಕೋಕೆ ಶುರು ಮಾಡಿಬಿಡ್ತೀನೋ ಅಂತ ಹೆದರಿಕೆ ಬಂತು !

ಕ್ಯಾಲಿಫೋರ್ನಿಯಾದಲ್ಲಿ, ಒಂದು ವಾರ ಕಾರಿನಲ್ಲೇ ಊರೂರು ಟೂರು ಮಾಡಿದ್ರಲ್ಲಿ Macdonald's, Denny's, Burgers, ಇಂಥಾ ಅಮೆರಿಕಾದ Chain restaurantಗಳ ದರ್ಶನ ಮಾತ್ರ ಆಗಿತ್ತು. ವೆಜಿಟೇರಿಯನ್ ಊಟಕ್ಕೂ, ಅವುಗಳಿಗೂ ಏನೇನೂ ಸಂಬಂಧವಿಲ್ಲ. ಆ ಒಂದು ವಾರದಲ್ಲಿ ನನ್ನ ನಾಲಿಗೆ ಸತ್ತು ಹೋಯಿತು. ದಿನಾ ರಾತ್ರಿ ಕನಸಿನಲ್ಲಿ ನಮ್ಮಮ್ಮ ಮಾಡೋ ಮೆಂತ್ಯದ ಗೊಜ್ಜು, ನಮ್ಮತ್ತೆ ಮಾಡೋ ಎಣ್ಣೆಗಾಯಿ, ನಮ್ಮ ಅಡಿಗೆಯವಳ ಸ್ಪೆಷಾಲಿಟಿ ವಾಂಗೀಭಾತ್, MTR ರವೆ ಇಡ್ಲಿ—ಎಲ್ಲ ಬಂದು ಬೆದರಿಸಿದುವು !

ಪ್ರಪಂಚದಲ್ಲೇ ದೊಡ್ಡ Aquarium ಇರೋ Monterrey ಅನ್ನೋ ಊರಿಗೆ ಹೋಗಿದ್ವಿ. ಊರನ್ನು ಪ್ರವೇಶಿಸುವಾಗ್ಲೇ 'ಘಂ' ಅಂತ ಮೀನಿನ ವಾಸನೆ ಘ್ರಾಣೇಂದ್ರಿಯವನ್ನು ಮುತ್ತಿ ಹಿಂಸೆ ಮಾಡಿತು. ಮಹಾಭಾರತದ ಮತ್ಸ್ಯಗಂಧಿ ಹ್ಯಾಗೆ 'ಸುಗಂಧ' ಬೀರುತ್ತಿದ್ದಳೂಂತ ಆ ದಿನ ನನಗೆ ಒಂದು ಐಡಿಯಾ ಬಂತು !

ಹಸಿವು. ಪ್ರಾಣ ಹೋಗ್ತಾ ಇತ್ತು. ಹೋಟಲಿಗೆ ಹೋದ್ವಿ. ಊರೇ ಮೀನಿನ ವಾಸನೆ ಅಂದ್ರೆ—ಇನ್ನು ಹೋಟಲಿನ ಒಳಗೆ ಹ್ಯಾಗಿದ್ದಿರಬಹುದೂಂತ ಊಹೆ ಮಾಡಿ ! ಹಸಿವಿಗೋ, ಇಲ್ಲಾ ಆ ಪರಿಮಳಕ್ಕೋ, ನನ್ನ ಹೊಟ್ಟೆಯಲ್ಲಿ ಅಲ್ಲೋಲ ಕಲ್ಲೋಲ ಆಗ್ತಾ ಇತ್ತು ! "ವೆಜಿಟೇರಿಯನ್ ಏನಾದ್ರೂ ಇದ್ಯೆ ?" ಅಂತ ವೆಯ್ಟರನ್ನು ಕೇಳಿದ್ರೆ, ಯಾವುದೋ ಮ್ಯೂಸಿಯಂನಲ್ಲಿರೋ ಪ್ರಾಣಿಯನ್ನು ನೋಡುವ ಹಾಗೆ ನೋಡ್ತಾ "What ? Vegetarian ? Sorry, Madam!" ಅಂದ ಭೂಪ.

"ಓ. ಕೇ. Sandwich ಆದ್ರೂ ಇದ್ಯೆ ?" ಅಂದೆ ಕ್ಷೀಣವಾಗಿ. "Sure! Madam!" ಅಂತ ಓಡಿ ಹೋಗಿ ಪ್ಲೇಟ್ ತುಂಬಾ ಸ್ಯಾಂಡ್‌ವಿಚ್ ತಂದಿಟ್ಟ ನೋಡಿದ್ರೇ.... ಎಲ್ಲ ಲಕ್ಷಣವಾಗಿ ತರಹಾವರಿ ಮೀನಿನ ಸ್ಯಾಂಡ್‌ವಿಚ್‌ಗಳು ! ನನ್ನ ಕೈಗೆ ಸಿಕ್ಕಿದ್ದು, ಬಾಯವರೆಗೆ ದಕ್ಕಲಿಲ್ಲ ! ಹೊಟ್ಟೆಯಲ್ಲಿ ಮಿಕ್ಕಿದ್ದೆಲ್ಲ ಕಕ್ಕುವ ಹಾಗಾಯ್ತು ! ಆ ಹೋಟೆಲಿನಲ್ಲಿ ಅಡಿಗೆ ಎಲ್ಲಾ ಮೀನೆಣ್ಣೆಯಲ್ಲಂತೆ !

ಲಾಸ್ ಏಂಜಲೀಸ್‌ಗೆ 50 ಮೈಲಿ ದೂರದಲ್ಲಿದ್ದ Catalina island ಅನ್ನುವ ಬಲು ಸುಂದರವಾದ ದ್ವೀಪಕ್ಕೆ ಹೋಗಿದ್ವಿ. ವೆಜಿಟೇರಿಯನ್ ಊಟ ಕೊಡ್ತಾರೇಂತ ಒಂದು ಮೆಕ್ಸಿಕನ್ ರೆಸ್ಟೋರೆಂಟ್‌ಗೆ ಹೋದ್ವಿ. ಅವರ ಸ್ಪೆಷಾಲಿಟಿ Taco ಅಂತೆ. ದೊಡ್ಡ ರೊಟ್ಟಿಯಂತಹ ಏನೋ ಒಂದು. ಯಥಾಪ್ರಕಾರ ಅದರ ತಲೆಯ ಮೇಲೆ ಅರ್ಧ ಡಜನ್ Sauceಗಳನ್ನ ಸುರಿದು ತಂದು ಇಟ್ಟರು. ಹ್ಯಾಗೆ ಶುರು ಮಾಡೋದೂಂತ ಯೋಚಿಸ್ತಾ ಇದ್ದೆ. ತಟ್ಟೆ ತುಂಬಾ ಇದ್ರೂ, ಇವತ್ತು ಹೊಟ್ಟೆ ತುಂಬೊಲ್ಲ ಅಂತ ಖಾತ್ರಿಯಾಯ್ತು. 'ಬೆದರಿದೋನ ಕಣ್ಣಿಗೆ ಕರ್ರಗಿದ್ದೋವೆಲ್ಲ ದೆವ್ವವಂತೆ'!

"ಅದಕ್ಕೇ ನೋಡು 'ಸರ್ವಂ ಭಕ್ಷಯಾಮಿ' ಅಂತ ಇದ್ರೆ, ಪ್ರಪಂಚಾನೆಲ್ಲಾ ಹೊಟ್ಟೆ ಯೋಚನೆ ಇಲ್ದೆ ಸುತ್ತಬಹುದು. ಈಗ ವೆಜಿಟೇರಿಯನ್ ಊಟ ತಂದಿದಾನಲ್ಲ. ತಿನ್ನೋಕೆ ಏನೀಗ ?" ಅಂದ್ರು ನಮ್ಮವರು.

"ಏನಿಲ್ಲಾ. ಏನೋ ಲೋಳೆ ಲೋಳೆಯಾಗಿ......."

"ಒಲ್ಲದ ಗಂಡನಿಗೆ ಬೆಣ್ಣೆಯಲ್ಲೂ ಕಲ್ಲಂತೆ! ಬಲು Prejudice ನಿಂಗೆ ಈ ಊರಿನ ಊಟದ ಮೇಲೆ. ತಿನ್ನೋದೂ ಅಂದ್ರೆ ಅಮೆರಿಕನ್ಸ್ ತರಹ ತಿನ್ಬೇಕಪ್ಪ. ಹ್ಯಾಗೆ ತಿಂತಾರೆ ನೋಡು!" ಅಂತ ಹೊಗಳಿದ್ರು.

ನಿಜವೇ! 4 ತಿಂಗಳು ಅಮೆರಿಕ ಸುತ್ತಿದ ಮೇಲೆ ನಾನು ಈ ನಿರ್ಧಾರಕ್ಕೆ ಬಂದೆ. "ಅಮೆರಿಕನ್ನರಿಗೆ ಮೂಗಿರೋದು ಮಾತಾಡೋಕೆ, ಬಾಯಿ ಇರೋದು ತಿನ್ನೋಕೆ" ಅಂತ! ನಾನು ಸಂಧಿಸಿದ ಸಾವಿರಾರು ಅಮೆರಿಕನ್ನರು ಸದಾ ಬಾಯಾಡಿಸುತ್ತಲೇ ಇದ್ರು! ಸುಮಾರು 3, 4 ಇಂಚು ದಪ್ಪ ಇರುವ ಸ್ಯಾಂಡ್‌ವಿಚ್‌ಗಳನ್ನು, ಗುಹೆಯ ಹಾಗೆ ಬಾಯಿ ಅಗಲಿಸಿ ಕಡಿಯೋ ವೈಖರಿ ಏನು! ರಸ್ತೆಯಲ್ಲಿ ಓಡಾಡೋ ಅರ್ಧ ಜನ ಕೈಯಲ್ಲಿ ಐಸ್ ಕ್ರೀಂ, Coke ಸ್ಯಾಂಡ್‌ವಿಚ್ ಹಿಡಕೊಂಡೇ ಓಡಾಡೋದು.

'ದಿ ಬಿಗ್ ಅಮೆರಿಕನ್' ಅನ್ನೋದು ಅವರಿಗೆ ಅನ್ವರ್ಥ ನಾಮ. ಊಟ ಮಾಡೋದೂ—ದೊಡ್ಡ ಸೈಜಿನಲ್ಲೇ. ಟಿ. ವಿ.ಯಲ್ಲಿ 50% ಜಾಹೀರಾತುಗಳು ಬರೀ ಊಟದ್ದೇ.

ಲಾಸ್ ಏಂಜಲೀಸ್‌ನಲ್ಲಿ Science museumಗೆ ಹೋಗಿದ್ವಿ. ಬರೀ ಆರೋಗ್ಯ, ಆಹಾರ, ಪೋಷಣೆ, ಡಯಟ್, ಇವುಗಳ ವಿಚಾರವೇ ತುಂಬಿತ್ತು. ನನ್ನನ್ನು ಆಕರ್ಷಿಸಿದ್ದು ಎಲ್ಲೆಲ್ಲೂ ಕಂಡ ಫಲಕಗಳು—"Americans eat lots and the wrong food" ಅಂತ!

ಒಂದು ಕಡೆ ಮೂಗಿನ ತನಕ ಚೀಸ್, ಬೆಣ್ಣೆ, Pork, Bacon ಮುಕ್ಕುವ ಜನ. ಇನ್ನೊಂದೆಡೆ ಎಲ್ಲೆಲ್ಲೂ ಹೆಲ್ತ್ ಕ್ಲಬ್‌ಗಳು, Cholesterol, diet, health awareness, ಅಂತ ಕೂಗು. ನಂಗಂತೂ ಅರ್ಥ ಆಗ್ಲಿಲ್ಲ!

ಹೊಟ್ಟೆಗೆ ಬಲು ಮರ್ಯಾದೆ ಕೊಡೋ ಜನ ಅಮೆರಿಕನ್ನರು! ಒಂದೆರಡು ಗಂಟೆ ಪಿಕ್‌ನಿಕ್ ಆದ್ರೂ ಸರಿ—ಭಾರಿ ಭಾರಿ ಬುಟ್ಟಿಗಳ ಭರ್ತಿ ಆಹಾರ, ಜತೆಗೇ ಟೇಬಲ್, ಕುರ್ಚಿ, ಕ್ಯಾಂಡ್ಲ್, ಎಲ್ಲ ಹೊತ್ತುಕೊಂಡು ಹೋಗಿ, ತಿನ್ನುತ್ತಾ, ಕೇಕೆ ಹಾಕುತ್ತಾ ಆನಂದ ಪಡ್ತಾರೆ.

ನಾವು ಹೋದ ಎಲ್ಲ ಹೋಟಲುಗಳಲ್ಲಿ ಬಲು ಒಳ್ಳೆಯ ವೆಜಿಟೇರಿಯನ್ ಊಟ ಸಿಕ್ಕಿದ್ದು ಇಥಿಯೋಪಿಯಾದ ಹೋಟಲಲ್ಲಿ. ನೋಡಲು ಸಹ ಅವರು ಭಾರತೀಯರ ತರಹವೇ ಇದ್ರು! ಅವರ ಸ್ಪೆಷಾಲಿಟಿ—ದೋಸೆ, ನುಗ್ಗೆ ಪಲ್ಯ, ಹೆಸರುಕಾಳು ಹುಳಿ! ಖುಷಿಯಾಗಿ ಊಟ ಮಾಡಿದೆ!

Grand Canyonನ Taiwanese ಹೋಟಲ್ಲಲ್ಲಿ ಬಲು ರುಚಿಯಾದ ವೆಜಿಟೇರಿಯನ್ ಪಲಾವ್ ಕೊಟ್ಟರು. ಜತೆಯಲ್ಲೇ ಬಟ್ಟಲಲ್ಲಿ ಕೆಂಪು ಬಣ್ಣದ Curry ಕೊಟ್ಟರು. ಎಲ್ಲವನ್ನೂ ಕಾಮಾಲೆ ಕಣ್ಣಿಂದ ನೋಡೋ ನನಗೋ ಅದನ್ನ ನೋಡಿ ಕೆಟ್ಟ ಅನುಮಾನ. ತಿಳಕೊಳ್ಳೋ ಗೋಜಿಗೆ ಹೋಗದೆ ಸುಮ್ಮನೆ ತಿಂದಿದ್ದರೂ ಆಗ್ತಿತ್ತು. "ಅಜ್ಞಾನಂ ಪರಮಾನಂದಂ, ಸುಜ್ಞಾನಂ ಪರಮ ವಿಷಂ" ಅಲ್ವೆ?! ಕೊನೆಗೂ ಪಲಾವ್ ನೆರವಿಗೆ ಟೊಮೆಟೋ ಸಾಸ್ ಬಂತು ಅನ್ನಿ!

ಸಾನ್ ಫ್ರಾನ್ಸಿಸ್ಕೋದಲ್ಲಿ ಹಾಗೇ ತಿರುಗುತ್ತಿದ್ದಾಗ, ಅವತ್ತೇ ಪ್ರಾರಂಭವಾದ ಇಂಡೋನೇಷಿಯನ್ ಹೋಟೆಲ್ ಕಣ್ಣಿಗೆ ಬಿತ್ತು. ಮೊದಲ ದಿನವಾದ್ದರಿಂದ 50% ರಿಯಾಯಿತಿ. ನಮ್ಮ ಜತೆ ಹಲವಾರು ಸ್ನೇಹಿತರು ಎಲ್ರಿಗೂ ಹೊಟ್ಟೆ ತಾಳ ಹಾಕ್ತಾ ಇತ್ತು. ಒಳಗೆ ನುಗ್ಗಿದೆವು. ರಾಜ್ಯಮರ್ಯಾದೆಯಾಯಿತು. ನನ್ನ ಹೊರತು ಮಿಕ್ಕವ ಲ್ಲರೂ ನಾನ್ ವೆಜಿಟೇರಿಯನ್ಸ್. ಧಾರಾಳವಾಗಿ ಆರ್ಡರ್ ಮಾಡಿದ್ರು, 50%ರಿಯಾ ಯಿತಿ ಅಲ್ವೆ? ಸೂಪರ್ ಸ್ಪೀಡಿನಲ್ಲಿ ಟೇಬಲ್ ಮೇಲೆ ಬಂದು ಕೂತ ಪದಾರ್ಥ ಗಳನ್ನು ನೋಡಿ ಎಲ್ಲರ ಮುಖಗಳೂ ಒಂಥರಾ ಪಾಚಿ ಹಸಿರು ಬಣ್ಣಕ್ಕೆ ತಿರುಗಿದ್ವು ಪಾಪ! ನಾನಾ ತರಹದ ಸಣ್ಣ ಪುಟ್ಟ ಪ್ರಾಣಿಗಳನ್ನ ಹೆಚ್ಚು ಕಮ್ಮಿ ಇಡಿಯಾಗಿ ತಂದಿ ಟ್ಟಿದ್ದರು. ಪೂರ್ತಿ ಬೇಯಿಸಿದ್ರೋ ಏನೋ ಅದೂ ತಿಳಿಯದು!

ನಾನೇನೋ ಈ ಸಲ ಬುದ್ಧಿವಂತಿಕೆಯಿಂದ ಒಂದಷ್ಟು ಸ್ಯಾಂಡ್‌ವಿಚಸ್ ಮಾಡಿ ಕೊಂಡು ಪರ್ಸಿನಲ್ಲಿಟ್ಟುಕೊಂಡಿದ್ದೆ. ತಿಂದು, ನೀರು ಕುಡಿದು ತಣ್ಣಗೆ ಕೂತೆ. ಎಲ್ಲರೂ

ಕೆದಕಿದ ಶಾಸ್ತ್ರ ಮಾಡಿ ಎದ್ದು ಬಂದುಬಿಟ್ಟರು. ಹೊಟ್ಟೆಗಳೆಲ್ಲ ಹಸಿವಿನಿಂದ ತಾಂಡವ ವಾಡ್ತಾ ಇದ್ವು. ಕೆಟ್ಟ ಮುಖ ಮಾಡ್ಕೊಂಡು ಹೊರಗೆ ಬಂದ್ರು.

"ಸರಿ, ಊಟ ಗೋವಿಂದಾ ! ಪಿಕ್ಚರ್‌ಗಾದ್ರೂ ಹೋಗೋಣವೇನ್ರೀ ?" ಅಂದ್ರು ಒಬ್ರು.

"ಅಯ್ಯೋ ! ಈ ಹಸಿವಿನಲ್ಲಿ ಪಿಕ್ಚರ್ ಬೇರೇನಾ ? ಹೊಟ್ಟೆಗೆ ಹಿಟ್ಟಿಲ್ಲ ಜುಟ್ಟಿಗೆ ಮಲ್ಲಿಗೆ ಹೂವೆ ?" ಅಂತ ಸಂಕಟಪಟ್ರು ಇನ್ನೊಬ್ರು. ತಕ್ಷಣವೇ ಎಲ್ಲರ ಬಾಯಿಂದಲೂ

"ಹೊಟ್ಟೇ ! ನಿನ್ನಿಂದ ನಾ ಕೆಟ್ಟೇ !"... "ಕನ್ನಂಬಾಡಿ ಕಟ್ಟೆ ಸುಲಭವಾಗಿ ತುಂಬಿದ್ರೂ, ಈ ಹೊಟ್ಟೆ ತಂಬೋದು ಕಷ್ಟಾಪ್ಪಾ!" ಅಂತ ಅಣಿಮುತ್ತುಗಳಂತೆ ಕೆಟ್ಟ ಕೆಟ್ಟ ಹೊಟ್ಟೆ ಗಾದೆಗಳು ಉದುರಿದುವು ! ಗಂಭೀರವಾಗಿ ಎಲ್ರೂ ಇಂಡಿಯನ್ನ ರೆಸ್ಟೋರೆಂಟನ್ನು ಹುಡುಕ್ಕೊಂಡು ಹೊರಟೆವು !

ಮೀನಾಕ್ಷಿ ಕಣ್ಣಲ್ಲಿ ಹೊಳೆದಿರಲು ಮೀನು
ಗಾಳವನ್ನು ಬೀಸಿದನು ನಮ್ಮೂರ ಸೀನು
ಗಾಳ ಕಣ್ಣಿಗೆ ಹೊಕ್ಕು
ಆಕೆ ತಣ್ಣಗೆ ನಕ್ಕು
ಓಂಟಿಯಾಗದೆ ಉಳಿದ ಒಂಟಿ ಸೀನು

—ಸುಮತೀಂದ್ರ ನಾಡಿಗ

ಒಂದು ಆತ್ಮ ಕತೆ

ಸೀ. ಆರ್. ಸತ್ಯ

ಹುಟ್ಟಿದ್ದು ಈ ಶತಮಾನದ ಮೊದಲಿನಲ್ಲಿ.

ಹುಟ್ಟೂರು : ಮೈಸೂರು.

ಭಾರಿ ಶ್ರೀಮಂತ ಮನೆತನದಲ್ಲೇ ನಾನು ಹುಟ್ಟಿದ್ದು. ನನ್ನ ಬಾಯಲ್ಲಿದ್ದ ಸ್ಪೂನ್ ಮಾತ್ರ ಯಾಕೆ, ನಮ್ಮನೇಲಿ ಗಿಡಗಳಿಗೆ ನೀರು ಹಾಕ್ತಿದ್ದ ಬಕೆಟ್ ಸಹಿತ ಬೆಳ್ಳೀದೆ ಆಗಿತ್ತು.

ಬೆಳೆದಿದ್ದೂ ಮೈಸೂರಲ್ಲೇ. ಆಗಿನ ಕಾಲದ ಮೈಸೂರಿನಲ್ಲಿ ಅಪ್ಪ ಅಮ್ಮನ್ನ ಡ್ಯಾಡಿ, ಮಮ್ಮಿ ಅಂತ ಕರೆಯೋ ಮಗು ನಾನೊಬ್ಬನೇ ಅಂತೆ. ನನಗೆ ಎರಡು ವರುಷ ವಯಸ್ಸಾದಾಗನಿಂದಲೇ ಡ್ಯಾಡಿ ನನಗೆ ಪಾಕೆಟ್ ಮನಿ ಕೊಡ್ತಿದ್ದರು ಅಂತ ಹೇಳಿದರೆ ನೀವು ನಂಬ್ತೀರಾ ? "ತುಂಟ ಮಗು, ಹತ್ತು ರೂಪಾಯಿ ನೋಟನ್ನ ಅದು ಎಷ್ಟು ಚೆನ್ನಾಗಿ ಹರ್ದಾಕಿಬಿಡ್ತು ನೋಡು" ಅಂತ ನನ್ನ ಗ್ರಾನ್ನಿ (ಅಂದರೆ ಅಜ್ಜಿ) ನನ್ನನ್ನ ಹೊಗಳ್ತಿದ್ದರಂತೆ. ಸರಿ, ನನಗೆ ವಾರ ವಾರಕ್ಕೂ ಹೊಸ ಹೊಸ ಬಟ್ಟೆಗಳು, ಬೂಟುಗಳು. "ಬೆಳೆಯೋ ಮಗು, ಅವನು ಹಾಕ್ಕೊಳ್ಳ ಬೇಕೇ ಹೊರತು, ನಮ್ಮಂತೆ ಬೆಳೆದು ಕೂತಿರೋರು ಹಾಕ್ಕೊಳ್ಳೋಕ್ಕಾಗು ತ್ತದೆಯೇ ?" ಅಂತ ನನ್ನ ಗ್ರ್ಯಾಂಪಾ (ಅಂದರೆ ತಾತ) ಹೇಳ್ತಿದ್ದರಂತೆ.

ಮೈಸೂರಿನಲ್ಲಿ ನಮ್ಮ ಶ್ರೀಮಂತಿಕೆಗೆ ತಕ್ಕ ಸ್ಕೂಲು ಇರಲಿಲ್ಲ ಅನ್ನೋದೇ ನಮ್ಮ ಡ್ಯಾಡಿಗೆ ಯೋಚನೆ ಆಗಿತ್ತಂತೆ. ಹೀಗಾಗಿ ನನ್ನ ವಿದ್ಯಾಭ್ಯಾಸವೆಲ್ಲಾ ಪ್ರೈವೇಟ್ ಟ್ಯೂಷನ್‌ನಲ್ಲೇ ಆಯ್ತು. ದೊಡ್ಡ ದೊಡ್ಡ ಪ್ರೊಫೆಸರುಗಳನ್ನೇ ಮನೆಗೆ ಬಂದು ಪಾಠ ಹೇಳೋದಕ್ಕೆ ಡ್ಯಾಡಿ ಗೊತ್ತು ಮಾಡಿದ್ರು. ಅ, ಆ, ಇ, ಈ ತನಕ ಒಬ್ಬ ಪ್ರೊಫೆಸರ್ ಪಾಠ ಹೇಳಿದರೆ ಉ, ಊ, ಎ, ಏ, ಐ ಇತ್ಯಾದಿಗಳಿಗೆ ಇನ್ನೊಬ್ಬ ಪ್ರೊಫೆಸರ್. ಹೀಗೆ, ಒಂದೊಂದು ಸಬ್ಜೆಕ್ಟ್‌ಗೆ ಒಂದೋ ಎರಡೋ ಪ್ರೊಫೆಸರ್‌ಗಳು. ಇವಲ್ಲದೇ ಕುದುರೆ ಸವಾರಿ, ಈಜೋದು, ಕಾರು ಬಿಡೋದು, ರೇಡಿಯೋ ಮಾಡೋದು ಇಂತಹ ಹವ್ಯಾಸಗಳಿಗೇ ಒಬ್ಬೊಬ್ಬ ಟೀಚರ್ರು.

ಈಗ ಹೇಳ್ಕೊಳ್ಳಕ್ಕೆ ನಾಚಿಕೆ ಆಗುತ್ತೆ. ನನ್ನ ಹುಟ್ಟಿದ ಹಬ್ಬದ ದಿವಸ ನನ್ನ ಡ್ಯಾಡಿ ಏನು ಮಾಡ್ತಿದ್ರು ಗೊತ್ತೆ ? ಕನ್ನಂಬಾಡಿಕಟ್ಟೆಯಲ್ಲಿ ಸ್ಪೆಶಲ್ ಆಗಿ ಲೈಟಿಂಗ್ ಮಾಡಿಸೋರು ! ವರುಷಕ್ಕೆ ಒಂದು ಸಲ ನನ್ನನ್ನ ಸಿಂಗಪುರ್‌ಗೋ, ಅಮೇರಿಕಾಗೋ, ಯೂರೋಪ್‌ಗೋ ಕರೆದುಕೊಂಡು ಹೋಗ್ತಾ ಇದ್ರು. ನನಗೆ ಈಗಲೂ ಜ್ಞಾಪಕ ಇದೆ. "ನಾವಿನ್ನೂ ನಂಜನಗೂಡಿಗೆ ಹೋಗಿ ನಮ್ಮ ಹರಕೇನೇ ತೀರಿಸೋಕ್ಕೆ ಆಗಿಲ್ಲ. ಈಗಾಗಲೇ ಈ ಚೋಟುದ್ದದ ಹುಡುಗ ಅಮೇರಿಕ, ಯೂರೋಪು ಅಂತ ಸುತ್ತಾಡ್ಕೊಂಡು ಬರ್‍ತಾನಲ್ರೀ ?" ಅಂತ ನಮ್ಮ ಅಕ್ಕ ಪಕ್ಕದ ಮನೆಯವರೆಲ್ಲಾ ಮೂಗಿನ ಮೇಲೆ ಕೈ ಇಟ್ಟುಕೊಂಡು ಹೇಗೆ ನಿಂತು ಕೊಂಡಿರ್‍ತಿದ್ದರೂ ಅಂತ ! ನನಗೆ ಕಾಲೇಜು ಹತ್ತೋ ವಯಸ್ಸಾದಾಗ ಕರ್ನಾಟಕ ರಾಜ್ಯದಲ್ಲೇ ಪ್ರಪ್ರಥಮವಾಗಿ ನನಗೆ ಸ್ಕೂಟರ್, ವೀ.ಸೀ.ಆರ್., ಟೀ.ವಿ., ಕಂಪ್ಯೂಟರ್ (ಆಗ ಅದರ ಗಾತ್ರ ಈಗಷ್ಟು ಚಿಕ್ಕದಾಗಿರಲಿಲ್ಲ) ಇಂಥವೆಲ್ಲಾ ನಮ್ಮ ಡ್ಯಾಡಿ ನನಗೆ ತಂದುಕೊಟ್ಟರೂ, ಭಾರತದಲಿಯ ಜೀವನ ಸಪ್ಪೆಯಾಯಿತು. ಡಿಗ್ರಿ ಪದವಿ ಪಡೆಯಲು ಅಮೆರಿಕಕ್ಕೆ ಹೊರಟೆ. ಡಿಗ್ರಿ ಪಡೆದದ್ದೂ ಆಯಿತು. ಡ್ಯಾಡಿ ಧಾರಾಳವಾಗಿ ದುಡ್ಡು ಕಳುಹಿಸುತ್ತಿದ್ದರಿಂದ ನನ್ನ ಜೀವನ ಯಾವ ಯೋಚನೆಗಳಿಲ್ಲದೇ ಮುಂದುವರೆಯಿತು.

ಈ ಸಮಯದಲ್ಲೇ ನನ್ನ ಜೀವನದಲ್ಲಿ ಒಂದು ಮಹೋತ್ತರ ಘಟನೆ ನಡೆಯಿತು. ಅಮೆರಿಕಾದ ಟಿ.ವಿ.ಯಲ್ಲಿ "ಪಾವರ್ಟಿ ಇನ್ ಇಂಡಿಯಾ" ಅಂತ ಒಂದು ಸಾಕ್ಷ್ಯ ಚಿತ್ರವನ್ನ ನೋಡಿದೆ. ತಕ್ಷಣ ಪಾವರ್ಟಿ ಅಂದರೆ ಬಡತನ ಅಂತ ಗೊತ್ತಾಯ್ತು ಬಿಡಿ. ಆದರೆ ಇದು "ಒರಿಜಿನಲ್" ಆಗಿ ಭಾರತದಲ್ಲೇ ಹೇಗಿರುತ್ತೆ, ನೋಡಬೇಕು ಅನ್ನಿಸಿತು. ಆಗ ನನ್ನ ಡ್ಯಾಡಿ "ಯಾವುದ್ಯಾವುದೋ ವಿಷಯಗಳನ್ನ ತಲೆಗೆ ಹಚ್ಚಿಕೋ ಬೇಡ. ಸಧ್ಯಕ್ಕೆ ನಿನ್ನ ಡಾಕ್ಟರೇಟ್ ಮುಗಿಸು. ಅಲ್ಲಿ ತನಕ ನೀನು ಭಾರತಕ್ಕೆ ಬರೋದೇನೂ ಅವಶ್ಯಕತೆ ಇಲ್ಲ" ಅಂತ ಖಡಾಖಂಡಿತವಾಗಿ ಹೇಳಿಬಿಟ್ಟರು. ಆದರೆ ನನ್ನಲ್ಲೇನು ಅಂತಹ ಭಾರತದ ಬಡತನದ ಬಗ್ಗೆ ಅನಾಸಕ್ತಿ ಇತ್ತೆಂದು ಮಾತ್ರ ನೀವು ನನ್ನನ್ನೇ ಅಪಾರ್ಥ ಮಾಡಿಕೊಳ್ಳಬೇಡಿ. ಅಂದೇ ನಾನು ನಮ್ಮ ಭಾರತದ ಬಡತನದ ಬಗ್ಗೆ ಜಾಸ್ತಿಯಾಗಿ ತಿಳಿಯುವುದು ಮಾತ್ರವಲ್ಲ, ಅದನ್ನು ಭಾರತದಿಂದ ಎತ್ತೆಸೆಯಬೇಕೆಂದೂ ನಿರ್ಧಾರ ಮಾಡಿದೆ.

ನನ್ನ ಡಾಕ್ಟರೇಟ್ ಸಂಶೋಧನೆಗೆ ನಾನು ಆರಿಸಿದ ವಿಷಯ ಏನು ಗೊತ್ತೆ? "ಭಾರತದ ಬಡತನದ ವೈಶಿಷ್ಟ್ಯತೆ" ಒಬ್ಬ ಬಡ ಭಾರತೀಯನ ಮನಸ್ಸಿನ ಉದ್ವೇಗಗಳು ಹೇಗಿರುತ್ತವೆ ಎಂಬುದನ್ನು ಖುದ್ದಾಗಿ ಅರಿಯಲು, ಎಷ್ಟೋ ದಿವಸ ನ್ಯೂಯಾರ್ಕಿನಲ್ಲಿ ಅರೆ ಬಟ್ಟೆಯಲ್ಲಿ ಅಲೆದೆ. ಒಂದು ದಿನ ರಾತ್ರಿ

ಊಟವಿಲ್ಲದೆಯೇ ಒಣಗಿದೆ. ದಿನಗಟ್ಟಲೆ ಸ್ನಾನ ಮಾಡದೇ ಇದ್ದ. ಇದರಿಂದಾಗಿ ನಾನು ಡಾಕ್ಟರೇಟ್ ಪದವಿಗ ತಯಾರಿಸಿದ 'ಟ್ರೀಟೈಸ್' ನಿಜ ಸ್ಥಿತಿಯನ್ನ ಕಣ್ಣು ಮುಂದೆ ತಂದಿಟ್ಟ ಹಾಗಿದೆ ಎಂದು ಹೊಗಳಿಕೆಗೆ ಪಾತ್ರವಾಗಿ, ಇಲ್ಲಿನ ರೊನಾಲ್ಡ್ ರೀಗನ್ ಯೂನಿವರ್ಸಿಟಿ ನನಗೆ ಡಾಕ್ಟರೇಟ್ ಪದವಿಯನ್ನ ಕೊಟ್ಟು ಗೌರವಿಸಿತು.

ಅನಂತರ ನನ್ನ ಜೀವನವೆಲ್ಲಾ ಭಾರತದ ಬಡತನಕ್ಕೇ ಮೀಸಲಾಗಿಟ್ಟೆ. ಇದಕ್ಕಾಗಿ ಅಮೆರಿಕೆಯಲ್ಲೇ ಸೆಟ್ಲ್ ಆಗಿ (ಇಂತಹ ಕೆಲಸಗಳಿಗೆ ಇಲ್ಲಿ ಅನುಕೂಲಗಳು ಹೆಚ್ಚು) ಕಾರ್ಯೋನ್ಮುಖನಾದೆ. ಇಲ್ಲಿಯ ಜಾಹೀರಾತುಗಳಿಗೆ ಭಾರತದ ಬಡತನದ ಛಾಯಾಚಿತ್ರಗಳನ್ನು ನಾನೇ ಒದಗಿಸಿಕೊಟ್ಟೆ. ಅಮೆರಿಕದ ಅನೇಕ ವಿಶ್ವವಿದ್ಯಾನಿಲಯಗಳಿಗೆ ಹೋಗಿ ಭಾರತದ ಬಡತನ ಮೇಲೆ ಉಪನ್ಯಾಸಗಳನ್ನ ಕೊಟ್ಟೆ. ಅನೇಕ ಹಳೆ ಬಟ್ಟೆಗಳನ್ನ, ಬ್ಲೇಡುಗಳನ್ನ, ಶೂ ಚಪ್ಪಲಿಗಳನ್ನ ಭಾರತಕ್ಕೆ ಆಗಾಗ್ಗೆ ಉಚಿತವಾಗಿ ಕಳಿಸುತ್ತಲೇ ಇದ್ದೀನಿ ಭಾರತದ ಬಡವನ ಮೇಲೆ ಕೆಲವು ಪುಸ್ತಕಗಳನ್ನೂ ಬರೆದಿದ್ದೀನಿ. ಉದಾಹರಣೆಗ :

No waist to tighten belt
(Vol. 1 & 2, World Poverty Series)

Hand to mouth or leg to mouth?
A deep study of India's poverty.

Food, food, everywhere,
Not a morsel to eat, ಇತ್ಯಾದಿ.

ಹೀಗೆ ನಿರಂತರವಾಗಿ ಭಾರತದ ಬಡವರಿಗೆಂದೇ ನನ್ನ ಜೀವನವನ್ನ ಮುಡುಪಿಟ್ಟು, ಇಷ್ಟು ವರ್ಷಗಳ ನಂತರ ವೆಕೇಶನ್‌ಗೆ ಅಂತ ಈಗ ಮೈಸೂರಿಗೆ ಬಂದಿದೀನಿ.

ನನ್ನ ಕೊನೆಯುಸಿರು ಇರುವವರೆಗೂ ನಾನು ಬಡವರಿಗಾಗಿ ಹೋರಾಡಲು ಸಿದ್ಧ (ಮೈಸೂರಿನಲ್ಲಿದ್ದರೂ ಸರಿ, ಅಮೆರಿಕಾದಲ್ಲಿದ್ದರೂ ಸರಿ).

ಅಂದ ಹಾಗೆ, ಮೇ ತಿಂಗಳ ಲೋಕ ಸಭಾ ಚುನಾವಣೆಗೆ ನಾನೂ ಒಬ್ಬ ಅಭ್ಯರ್ಥಿ.

ನಿಮ್ಮ ಓಟು ನನಗೇ ಇರಲಿ.

ಗುಡ್ ಬೈ.

ಅಪರಂಜಿ ಜಾಹೀರಾತು ದರಗಳು

ಪೂರ್ಣ ಪುಟ (Full Page)–	ರೂ. 800/-	ಮೂರು ಸಂಚಿಕೆಗಳಲ್ಲಿ ಸತತ
ಅರ್ಧ ಪುಟ (Half Page)–	ರೂ. 400/-	
ಕಾಲು ಪುಟ (Quarter Page)–	ರೂ. 250/-	

ಜಾಹೀರಾತುಗಳನ್ನು, ಅವುಗಳ ವರ್ಗಕ್ಕೆ ತಕ್ಕ ಚೆಕ್ಕುಗಳೊಡನೆ ಕೆಳಗಿನ ವಿಳಾಸಕ್ಕೆ ಕಳುಹಿಸಿ.

ಅಪರಂಜಿ ಕಾರ್ಯಾಲಯ
36, 6ನೇ ಮುಖ್ಯ ರಸ್ತೆ
ಮಲ್ಲೇಶ್ವರಂ ಬೆಂಗಳೂರು–560 003

ವಿ.ಸೂ:– ಚೆಕ್ಕುಗಳನ್ನು ಅಪರಂಜಿ ಹೆಸರಿಗೆ ನಮೂದಿಸಬಹುದು

REGISTERED No. BGW-180

Printed by V R NATH for the Publisher M SHIVA KUMAR, Published and owned by M SHIVA KUMAR, 36, 6th Main Road, Malleswaram, Bangalore-560 003 Printed at IMPRESSIONS, 404, Sampige Road, Malleswaram, Bangalore-560 003 Editor M SHIVA KUMAR